॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XVIII, No. 11 February 2011 Pages 12 **Rs. 2/-**





PICNIC PHOTOS

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Hon. Joint Editor*** : G. V. Bhagwat

***Editorial Committee***
R. P. Hegde
R. M. Shastri
Smt. Shashikala Hegde

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde — R. P. Hegde
Smt. Shashikala Hegde — R. N. Kameshwar
A. K. Bhat — Smt. Uma Swamy
M. R. Ramakrishna — Sanjay Bhat
Sathishkumar K.C.

***Co-opted Members :***

G. V. Bhagwat — Balchandra Markande
Ganesh Shanbhag — Prabhakar Bhat
Shripad Bhat

*ಸಂಪಾದಕೀಯ*

# ವಿರಾಮವೂ ಬೇಕು

ಹಸಿರು ಗುಡ್ಡಗಳ ಸಾಲಿನ ನಡುವೆ ಜುಳು ಜುಳಿನುತಾ ಹರಿಯುವ ವೈತರಣಾ ನದಿ. ಅಲ್ಲಲ್ಲಿ ಪಕ್ಷಿಗಳ ಕಲರವ. ಕಣ್ಮನ ತಣಿಸುವ ನಿಸರ್ಗದ ಮಡಿಲಲ್ಲಿ ನಮ್ಮ ಸಂಸ್ಥೆಯ ಈ ವರ್ಷದ ಪ್ರವಾಸ ತಾಣ "Silent Hill Resort" ಅಲ್ಲಿ ಮಾನವ ನಿರ್ಮಿತ ಹಸಿರು ಲಾನ್‌ಗಳು ಅವುಗಳಿಗೆ ಅಂಚು ಕೊಟ್ಟಂತೆ ಹಾಸಿದ ಬಿಳಿಪು ಕಲ್ಲುಗಳು. ಆಕಾರ ಪಡೆದು ಸಾಲಾಗಿನಿಂತ ಗಿಡಗಂಟಿಗಳ ನಡುವೆ ನೀಲಿ ಈಜುಕೊಳ, ಹಾರುವ ಕಾರಂಜಿಗಳು, ಅವುಗಳ ನಡುವೆ ಕೆಲವು ಪಾಲಕರು ಮಕ್ಕಳನ್ನು ಆಡಿಸುತ್ತಿದ್ದರೆ, ಕೆಲವರು ವೀಕ್ಷಿಸುತ್ತಿದ್ದರು. ಇನ್ನು ಕೆಲವರು ಪ್ರಕೃತಿ ಸೌಂದರ್ಯವನ್ನು ಆಹ್ಲಾದಿಸುತ್ತ ವಿಹರಿಸುತ್ತಿದ್ದರು. ಭಾವಣಿಯ ಕೆಳಗೆ ವಿವಿಧ ಆಟಗಳು ಪ್ರಾರಂಭವಾದಾಗ ಮಕ್ಕಳು ಹಾಗೂ ದೊಡ್ಡವರು ಎನ್ನುವ ವ್ಯತ್ಯಾಸ ಮರೆತು ಹೋಗಿತ್ತು. ಸಂಜೆ ಪಕ್ಷಿಗಳು ಗೂಡಿಗೆ ತೆರಳಿದಂತೆ ಮನೆಗೆ ಮರಳುವಾಗ ಉಲ್ಲಸಿತವಾಗಿ ದಿನಕಳೆದ ಸಂತ್ರಪ್ತಿ ಮುಖದಲ್ಲಿ ಮೂಡಿತ್ತು.

ದಿನನಿತ್ಯದ ಕೆಲಸಗಳು ಭಾರವೆನಿಸುವ ಮುನ್ನ, ಕೆಲಸ ಮಾಡುವಾಗ ಮಾಡಲೇ ಬೇಕಲ್ಲ ಎನ್ನುವ ಉದಾಸೀನತೆ ಒಡಮೂಡುವ ಮೊದಲೇ ನಮಗೆ 'ಬಿಡುವು' ಬೇಕು. ನಮ್ಮ ಆಪ್ತರೊಡನೆ, ನಮ್ಮ ಮಿತ್ರರೊಡನೆ, ಸುತ್ತ ಮುತ್ತಲಿನ ಪ್ರಕೃತಿಯೊಡನೆ ನಾವು ಕಳೆಯುವ ಸಮಯವೂ ಕೂಡ ನಮ್ಮ ಜೀವನದ 'Investment' ಎನ್ನುವದನ್ನು ನಾವು ಮರೆಯಬಾರದು. ನಿಜ ಹೇಳಬೇಕೆಂದರೆ ಇಂತಹ ರಸನಿಮಿಷಗಳಿಗೆ ಬೆಲೆಯನ್ನು ಕಟ್ಟಲಾರದು. ಏಕೆಂದರೆ ಅವು ನಮಗೆ ಆನಂದವನ್ನು ನಿಡುವದಷ್ಟೇ ಅಲ್ಲ, ಬಿಡುವಿನ ನಂತರ ನಮ್ಮ ದೈನಂದಿಕ ಚಟುವಟಿಕೆಗಳಲ್ಲಿಯೂ ಹೊಸ ಉತ್ಸಾಹ ಮೂಡುತ್ತದೆ. ಒತ್ತಡ ಕಡಿಮೆಯಾಗಿ ಮನಸು ಹಗುರಾದಾಗ ಮಾಡುವ ಕೆಲಸಗಳು ಮತ್ತೊಮ್ಮೆ ಪ್ರಿಯವೆನಿಸತೊಡಗುತ್ತವೆ. ಜೊತೆಗೆ ಸವಿನೆನಪುಗಳನ್ನು ಮೆಲಕು ಹಾಕುವದು ಕೂಡ ಚೇತೋಹಾರಿಯಾಗಬಲ್ಲದು. ಹೀಗಾಗಿಯೇ ಪ್ರವಾಸಗಳೂ ಕೂಡ ನಮ್ಮ ಜೀವನದ ಭಾಗವಾಗಬೇಕು. ಆಗಾಗ ನಮಗೆ ವಿರಾಮವೂ ಬೇಕು.

**ನಿತ್ಯ ಸುಂದರಿ :** ಉತ್ತರ ಭಾರತದಲ್ಲಿ, ಅಷ್ಟೇಕೆ, ಇಡೀ ಜಗತ್ತಿನಲ್ಲಿಯೇ ಹಿಮವೃಷ್ಠಿಯಾಗುತ್ತಿದೆ. ಹಿಮದಿಂದಾವೃತ್ತವಾದ ದೃಶ್ಯಗಳು ವರ್ತಮಾನ ಪತ್ರಿಕೆಗಳಲ್ಲಿ, ದೂರದರ್ಶನ ವಾಹಿನಿಗಳಲ್ಲಿ ಕಾಣುತ್ತಿವೆ.

ಹುಡುಕಿದರೂ ಪ್ರಕೃತಿಯಲ್ಲಿ ಏಕತಾನತೆ ಕಾಣಸಿಗದು. ವೈವಿಧ್ಯಮಯವಾಗಿರುವ ಪ್ರಕೃತಿ, ಋತುವಿಗೆ ತಕ್ಕಂತೆ ಬಣ್ಣವನ್ನೂ ಬದಲಾಯಿಸುತ್ತಾಳೆ. ವಸಂತ ಋತುವಿನಲ್ಲಿ ವಿವಿಧ ಹೂ, ಹಣ್ಣುಗಳಿಂದ ವರ್ಣಮಯವಾಗಿ ಕಂಗೊಳಿಸಿದರೆ, ಮಳೆಗಾಲದಲ್ಲಿ ಹರಿಯುವ ನೀರಿನ ಝುರಿಗಳ ನಡುವೆ ಹಸಿರುಡುಗೆಯ ತೊಟ್ಟು ವನದೇವಿಯಾಗಿ ವಿಜ್ರಂಭಿಸುತ್ತಾಳೆ. ಈಗ ಹಿಮದುಡುಗೆಯನ್ನು ಉಟ್ಟ ಶ್ವೇತಾಂಬರಿಯಾಗಿ ಮನ ಸೆಳೆಯುತ್ತಾಳೆ. ಹೇಗಿದ್ದರೂ ಅವಳು ನಿತ್ಯ ಸುಂದರಿ.

ನಮಗೆ ಅದನ್ನು ಆಹ್ಲಾದಿಸುವ ಕಣ್ಣು ಬೇಕು. ಋತುಮಾನದ ಚಂದವನ್ನು ಅನುಭವಿಸುವ ಮನಸ್ಸು ಬೇಕು. ಎಲ್ಲಾ ಕಾಲದಲ್ಲಿಯೂ ಗೊಣಗಾಡುವವರನ್ನು ಕಂಡಾಗ ಹಿಂದೊಮ್ಮೆ ಓದಿದ ಕವಿತೆಯ ಸಾಲುಗಳು ನೆನಪಾಗುತ್ತದೆ.

**''ಚಳಿಗಾಲ ಬಂದಾಗ ಎಷ್ಟು ಛಳಿ ಎಂದರು**
**ಬಂತಲ್ಲ ಬೇಸಿಗೆ ಕೆಟ್ಟ ಬಿಸಿಲೆಂದರು**
**ಮಳೆ ಬಿತ್ತು, ಬಿಡದಲ್ಲ ಶನಿ ಎಂಬ ಟೀಕೆ**
**ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ''**

ಕಾಂಕ್ರೀಟ್ ನಗರಿ ಮುಂಬಯಿಯಲ್ಲಿಯೂ ಚಳಿ ತನ್ನ ಪ್ರಭಾವ ಬೀರುತ್ತಿದೆ. ಸ್ವೆಟರ್ ಶಾಲುಗಳೂ ಹೊರಗೆ ಬಂದಿವೆ. ಈ ಚಳಿಗಾಲವನ್ನು ಆನಂದಿಸುತ್ತ, ಎಳ್ಳು ಬೆಲ್ಲವನ್ನು ಹಂಚುತ್ತ ಸ್ನೇಹವನ್ನು ವರ್ಧಿಸೋಣ. ಜನವರಿ 15ರಿಂದ ಉತ್ತರ ದಿಕ್ಕಿನಿಂದ ಪಯಣಿಸುತ್ತ ಹೆಚ್ಚು ಬೆಳಕನ್ನು ನೀಡುವ ಸೂರ್ಯ ನಮ್ಮೆಲ್ಲರ ಬಾಳನ್ನು ಬೆಳಗಲಿ. ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯವನ್ನು ಕೋರುತ್ತೇನೆ.

Amita S Bhagwat

e-mail : amitabhagwat@gmail.com

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR*** *(DEC.-2009)*

# PRESIDENT'S MESSAGE

Dear Friends,

All the members who along with their family attended the picnic on 16th Jan. 2011 enjoyed it very much. Silent Hill Resort is a beautiful place surrounded by natural landscapes. The spacious resort with swimming pools and different water games caught the fancy of everybody. Food was delicious. Service was good. More importantly, the enthusiasm of the Team members who organized the picnic in a professional manner was the key point for the success of the picnic. They planned it meticulously to ensure that there were games for all age groups so that there could be not a single boring moment. We are happy that every year more and more members and their families are attending the picnic. This year the number reached 165. We would like to mention that the Trust spends as much as Rs.45, 000/-. The very purpose of organizing the picnic is to bring the feeling of togetherness amongst the Havyaka families and we are happy that our purpose is fulfilled. We expect similar response in future also.

Friends, this is the fifth consecutive year we are holding the award function of Shri Karki Venktraman Shastri Suri. This year's Award will be conferred upon Shri Vighneshwar Sharma, Taddalse, an eminent journalist from Sirsi on 20th March 2011 at Vishweshwarayya Hall. The Yakshagana and cultural programs are the other attractive programs arranged along with the award ceremony, which will open a platform to many budding artists to showcase their talent. To run such a program smoothly every year, it is very essential to generate funds so that the Trust is not burdened. Hence we solicit your patronage by way of participation and donation towards KVSS Endowment Fund.

We appreciate the efforts put in by the Women's' wing in generating funds and distributing scholarship to the needy and deserving students, especially girls, studying not only in and around Mumbai but in interior parts of Karnataka. It is worth mentioning here that as in the last two years, this year too we could help around 58 students by giving them educational aid totaling Rs.1.63,000. With the sole objective of extending the help in long run, the women's wing is planning to hold the charity show "Yakshagana" by women artists from Karnataka on 10th April 2011 at Mumbai. You will appreciate the initiative taken by them in lending helping hands and we should, without any hesitation, extend our support wholeheartedly towards this noble cause. We earnestly request all Havyakas to come forward and see that helping for this noble cause is continued for ever.

We are happy to inform that the bidder of Panvel Land has deposited the amount in full in the bank account of Havyaka co-operative housing society (Proposed) without having complied without any formalities including registration, which shows the faith and confidence of the builder about Dr. Dinesh Hegde, the Chairman of the Ad-Hoc committee. We are proud to have such personalities in our community who can make the impossible things happen. Let us prove the point by giving all possible support to Dr. Dinesh Hegde so that the transaction goes smooth till the end.

There is no progress about getting NA Status to Dombivli Land.

With warm regards.

**N.R. HEGDE**

*President*

## LETTER TO THE EDITOR

Dear Sir,

I was very glad to attend the Picnic organized by HWT at Silent Hill Resort on 16th January, 2011. My experience in the last year's picnic was very good, which made me to attend the picnic this year, coming all the way from Nashik.

The picturesque spot, delicious food served and the different games organized for different age groups made the picnic enjoyable. Children enjoyed at Water park and swimming pool. The bus arrangement to reach the picnic spot was also well organized. The experience is a memorable one. I congratulate the President Shri N.R. Hegde, Mr. Sanjay Bhat and his team for their meticulous planning in conducting the various programmes at picnic.

**S. M. BHAT**

***President***

**HAVYAKA ASSOCIATION, NASIK**

*PAGE DONATED BY : **SMT. GANGA P. BHAGWAT,** PRABHADEVI, IN MEMORY OF LATE SHRI P. R. BHAGWAT (DEC.-2010)*

# ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ

# HAVYAKA WELFARE TRUST, MUMBAI

## "ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ" ಪ್ರಶಸ್ತಿ ಪ್ರದಾನ ಸಮಾರಂಭ-2011

## "Karki Venkataraman Shastri Suri" Award Presentation Ceremony - 2011

**DATE : 20-3-2011 TIME : 3.00 P.M.**

**Venue : Vishweshwarayya Hall, Karnataka Sangha, Matunga (W), Mumbai**

| | |
|---|---|
| ಸಹಕಾರ / Co-operation | ಕರ್ನಾಟಕ ಮಲ್ಲ, ಕನ್ನಡ ದೈನಿಕ ಮುಂಬಯಿ<br>Karnataka Malla, Kannada Daily News Paper, Mumbai<br>ಕರ್ನಾಟಕ ಸಂಘ, ಮಾಟುಂಗಾ ( ಪ ), ಮುಂಬಯಿ<br>Karnataka Sangha, Matunga (W), Mumbai |
| ಪ್ರಶಸ್ತಿ ಪಾತ್ರರು / Awardee | ಹಿರಿಯ ಪತ್ರಕರ್ತರು ಶ್ರೀ ವಿಘ್ನೇಶ್ವರ ಶರ್ಮಾ, ತದ್ದಲಸೆ,<br>Senior Journalist SHRI VIGNESHWAR SHARMA, Taddalse |
| ಮುಖ್ಯ ಅತಿಥಿಗಳು<br>Guest of Honour | ಶ್ರೀ ಪ್ರಕಾಶ್ ಭಂಡಾರಿ ( ಎಸಿಪಿ, ಇಂಟೆಲಿಜೆನ್ಸ್, ಮುಂಬಯಿ )<br>Shri Prakash Bhandari (ACP, Intelligence, Mumbai) |
| ವಿಶೇಷ ಅತಿಥಿಗಳು<br>Guest of Honour | ಶ್ರೀ ಚಂದ್ರಶೇಖರ ಪಾಲೆತ್ತಾಡಿ ( ಸಂಪಾದಕರು ಕರ್ನಾಟಕ ಮಲ್ಲ, ದೈನಿಕ )<br>Shri Chandrashekar Palettadi, (Editor, Karnataka Mall, Daily)<br>ಶ್ರೀ ಜಿ.ಡಿ. ಜೋಶಿ ( ಅಧ್ಯಕ್ಷರು, ಕರ್ನಾಟಕ ಸಂಘ ಮಾಟುಂಗಾ )<br>Shri G. D. Joshi (President, Karnataka Sangha Matunga) |
| ಅಧ್ಯಕ್ಷತೆ / Chairperson | ಶ್ರೀ ಎನ್. ಆರ್. ಹೆಗಡೆ ( ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ )<br>Shri N. R. Hegde (President, HWT, Mumbai) |

**ಮನೋರಂಜನಾ ಕಾರ್ಯಕ್ರಮಗಳು/ Entertainment Programmes**

| | | |
|---|---|---|
| ನೃತ್ಯ / Dance | ಕು। ಪ್ರಿಯಾಂಜಲಿ ರಾವ್<br>Kum. Priyanjali Rao | 3.00 p.m. to 3.30 p.m. |
| | ಕು। ವೈಷ್ಣವಿ ಶೆಟ್ಟಿ<br>Kum. Vaishnavi Shetty | |
| ಸುಗಮ ಸಂಗೀತ / Classical Songs | ಕಲಾ ಸೌರಭ, ಮುಂಬಯಿ<br>Kala Sourabha, Mumbai | 3.30 p.m. to 4.00 p.m. |
| | ಪ್ರಶಸ್ತಿ ಪ್ರಧಾನ / Award Presentation<br>4.00 p.m. to 6.00 p.m. | |
| ಯಕ್ಷಗಾನ / Yakshagana | ಗದಾ ಪರ್ವ<br>GADA PARVA<br>By Gopalakrishna Yakshagana Kala Kendra | 6.30 p.m. to 9.00 p.m. |

**ತಾವೆಲ್ಲರೂ ಸಪರಿವಾರ ಪಾಲ್ಗೊಂಡು ಕಾರ್ಯಕ್ರಮವನ್ನು ಚೆಂದಗಾಣಿಸಬೇಕಾಗಿ ವಿನಂತಿ**

ಶ್ರೀ ಎನ್. ಆರ್. ಹೆಗಡೆ ( ಅಧ್ಯಕ್ಷರು )
ಶ್ರೀ ನಾರಾಯಣ ಅಕ್ಕದಾಸ ( ಗೌ. ಕಾರ್ಯದರ್ಶಿ )
ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

ಶ್ರೀಮತಿ ತನುಜಾ ಹೆಗಡೆ
( ಸಂಚಾಲಕರು, ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿ ಕಾರ್ಯಕ್ರಮ )

*PAGE DONATED BY : **ADVOCATE M.S. PANDIT, PUNE .***

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*(ಹಿಂದಿನ ಸಂಚಿಕೆಯಿಂದ)*

- ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು

## ಕಳವು-ಪ್ರಾಯಶ್ಚಿತ್ತ

ನನಗೂ ನಮ್ಮ ನೆಂಟನೊಬ್ಬನಿಗೂ ಸಿಗರೇಟು ಸೇದಬೇಕೆನಿಸಿತು. ಅದು ಒಳ್ಳೆಯದೋ ಕೆಟ್ಟದ್ದೋ, ಅದರಿಂದ ಆಗುವ ಲಾಭ ಏನು ಎಂಬುದೆಲ್ಲ ನನಗೆ ಬೇಕಿರಲಿಲ್ಲ. ನಮ್ಮ ಚಿಕ್ಕಪ್ಪನಿಗೆ ಅದರ ಅಭ್ಯಾಸವಿತ್ತು. ಅವರನ್ನು ಅನುಕರಿಸಬೇಕು. ಅವರಂತೆಯೇ ಹೊಗೆಯ ಮೋಡಗಳನ್ನು ಸೃಷ್ಟಿಸಬೇಕು ಎಂದು ಅನಿಸಿತು. ಆದರೆ ನಮ್ಮ ಬಳಿ ದುಡ್ಡಿರಲಿಲ್ಲ. ಚಿಕ್ಕಪ್ಪ ಸೇದಿ ಬಿಸಾಡಿದ ತುಂಡುಗಳನ್ನು ಕದ್ದು ಸೇದಲಾರಂಭಿಸಿದೆವು. ಆದರೆ ಅದರಿಂದ ಹೆಚ್ಚು ತೃಪ್ತಿಯಾಗಲಿಲ್ಲ. ಜೊತೆಗೆ ಯಾವಾಗಲೂ ಆ ತುಂಡುಗಳು ಸಿಗುತ್ತಿರಲಿಲ್ಲ. ಸಿಕ್ಕರೂ ಹೆಚ್ಚು ಹೊತ್ತು ಸೇದಲು, ಹೊಗೆ ಬಿಡಲು ಆಗುತ್ತಿರಲಿಲ್ಲ. ಹಾಗಾಗಿ ನಾನು ಮನೆಕೆಲಸದವನ ಜೇಬಿನಿಂದ ಪುಡಿಗಾಸನ್ನು ಕದ್ದು ಸಿಗರೇಟನ್ನು ಕೊಳ್ಳಲಾರಂಬಿಸಿದೆ. ಆದರೆ ಆ ಸಿಗರೇಟನ್ನು ಬಚ್ಚಿಡುವುದು ಎಲ್ಲಿ ಎಂಬ ಸಮಸ್ಯೆಯೂ ಬಂತು. ಏಕೆಂದರೆ ನಾವು ದೊಡ್ಡವರ ಮುಂದೆ ಸಿಗರೇಟು ಸೇದುವಂತಿರಲಿಲ್ಲ. ಹೀಗೆ ಪುಡಿಗಾಸನ್ನು ಕದಿಯುತ್ತಲೇ ಕೆಲವು ವಾರ ಕಳೆದವು. ಆಮೇಲೆ ಯಾವುದೋ ಗಿಡದ ಕಾಂಡವನ್ನು ಸುತ್ತಿ ಸಿಗರೇಟಿನಂತೆ ಸೇದಬಹುದೆಂಬ ವಿಷಯ ಗೊತ್ತಾಯಿತು. ಅದನ್ನು ಪತ್ತೆ ಹಚ್ಚಿ ಆ ಪ್ರಯೋಗವನ್ನೂ ಮಾಡಿದೆವು. ಆದರೆ ಅದರಿಂದ ನಮಗೆ ಹೆಚ್ಚಿನ ತೃಪ್ತಿ, ಸಂತೋಷವೇನೂ ಸಿಗಲಿಲ್ಲ.

ನಮ್ಮ ಪರಾಧೀನತೆ ತೀರಾ ಅಸಹನೀಯವಾಗಿತ್ತು. ದೊಡ್ಡವರ ಒಪ್ಪಿಗೆ ಇಲ್ಲದೆ ನಾವು ಏನನ್ನೂ ಮಾಡುವಂತಿರಲಿಲ್ಲ. ಇದರಿಂದ ಬೇಸತ್ತ ನಾವು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆವು, ಆದರೆ ಹೇಗೆ? ವಿಷವನ್ನು ಕೊಳ್ಳಲೂ ನಮ್ಮ ಬಳಿ ಹಣವಿರಲಿಲ್ಲ. ದತ್ತೂರಿ ಬೀಜದಲ್ಲಿ ವಿಷವಿರುತ್ತದೆ ಎಂದು ಗೊತ್ತಿತ್ತು. ಸರಿ, ಕಾಡಿನಲ್ಲಿ ಅಲೆದು ನಾಲ್ಕಾರು ಬೀಜಗಳನ್ನು ಸಂಪಾದಿಸಿದೆವು. ವಿಷ ಸೇವನೆಗೆ ಒಂದು ದಿನ ಸಂಜೆಯ ಮುಹೂರ್ತವನ್ನು ಇಟ್ಟುಕೊಂಡೆವು. ಕೇದಾರನಾಥನ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡಿ, ತುಪ್ಪದ ದೀಪ ಹಚ್ಚಿದೆವು. ಗೊತ್ತುಪಡಿಸಿದ್ದ ಏಕಾಂತ ಸ್ಥಳಕ್ಕೆ ಹೋದೆವು. ಆದರೆ ವಿಷ ಉಣ್ಣಲು ಧೈರ್ಯ ಬರಲಿಲ್ಲ. ತತ್‌ಕ್ಷಣ ಪ್ರಾಣ ಹೋಗದಿದ್ದರೆ? ಆತ್ಮಹತ್ಯೆಯಿಂದ ಆಗುವ ಲಾಭವಾದರೂ ಏನು? ಪರಾಧೀನರಾಗಿ ಹೋದರೆ ಏನಾಗುತ್ತದೆ ಎಂದೆಲ್ಲಾ ಯೋಚಿಸಲಾರಂಭಿಸಿದೆವು. ಇಷ್ಟುಹೊತ್ತಿಗೆ ಒಂದೆರಡು ಬೀಜಗಳನ್ನು ತಿಂದಿದ್ದೆವು. ಅದಕ್ಕಿಂತ ಹೆಚ್ಚು ತಿನ್ನಲು ಧೈರ್ಯ ಬರಲಿಲ್ಲ. ಕೊನೆಗೆ ಆತ್ಮ ಹತ್ಯೆಯ ವಿಚಾರವನ್ನು ಬಿಟ್ಟು ಮತ್ತೆ ದೇವಸ್ಥಾನಕ್ಕೆ ಹೋಗಿ, ದೇವರಿಗೆ ನಮಸ್ಕಾರ ಮಾಡಿ, ಶಾಂತ ಮನಸ್ಕರಾಗಿ ವಾಪಸ್ಸಾದೆವು.

ಆತ್ಮಹತ್ಯೆಯ ಬಗ್ಗೆ ಆಲೋಚಿಸುವುದು ಸುಲಭ, ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಸುಲಭವಲ್ಲ ಎಂದು ನನಗೆ ಆಗಲೇ ಮನದಟ್ಟಾಯಿತು. ಆತ್ಮಹತ್ಯೆಯ ಆಲೋಚನೆಯಿಂದ ಒಂದಂತೂ ಒಳ್ಳೆಯ ಪರಿಣಾಮವಾಯಿತು. ಕದ್ದು ಸಿಗರೇಟು ಸೇದುವುದು, ಸಿಗರೇಟಿಗಾಗಿ ಮನೆಯ ಕೆಲಸದವನ ಜೇಬಿನಿಂದ ಪುಡಿಗಾಸು ಕದಿಯುವುದನ್ನು ನಾನು ಬಿಟ್ಟು ಬಿಟ್ಟೆ. ದೊಡ್ಡವನಾದ ಮೇಲೆ ನನಗೆಂದೂ ಸಿಗರೇಟು ಸೇದಬೇಕೆಂದು ಅನಿಸಲೇ ಇಲ್ಲ. ಬೀಡಿ, ಸಿಗರೇಟಿನ ಚಟ ಅಸಹ್ಯ, ಅಸಭ್ಯ, ಅನಾರೋಗ್ಯಕರ ಎಂದು ನನ್ನ ಭಾವನೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಅಕ್ಷಮ್ಯ. ಬೀಡಿ ಸಿಗರೇಟಿನ ಹೊಗೆಯಿಂದ ತುಂಬಿರುವ ರೈಲುಗಾಡಿಯಲ್ಲಿ ಪ್ರಯಾಣಿಸುವುದೆಂದರೆ ನನಗೆ ಉಸಿರು ಕಟ್ಟಿದ ಹಾಗಾಗುತ್ತದೆ. ಸಿಗರೇಟಿಗಾಗಿ ಪುಡಿಗಾಸು ಕದ್ದಾಗ ನನಗೆ ಹನ್ನೆರಡೋ, ಹದಿಮೂರೋ ವರ್ಷ. ಆ ಮೇಲೆ ಕೂಡ ನಾನು ಮತ್ತೊಮ್ಮೆ ಕಳವು ಮಾಡಿದ್ದೆ. ಮಾಂಸಾಹಾರಿಯಾಗಿದ್ದ ನನ್ನ ಅಣ್ಣನಿಗೆ ೨೫ ರೂ. ಸಾಲ ಇತ್ತು. ಅದನ್ನು ಹೇಗೆ ತೀರಿಸುವುದೆಂದು ಗೊತ್ತಿರಲಿಲ್ಲ. ಇಬ್ಬರೂ ಕೂಡಿ ಒಂದೇ ಸಮ ಯೋಚಿಸಿದೆವು. ಆತನ ಕೈಯಲ್ಲಿ ಒಂದು ಚಿನ್ನದ ಕಡಗವಿತ್ತು. ಅಗರಲ್ಲಿ ಒಂದು ಚೂರನ್ನು ಕತ್ತರಿಸಿ ಸಾಲ ತೀರಿಸಿದೆವು. ಸಾಲವೇನೋ ತೀರಿತು. ಆದರೆ ಮನಸ್ಸಿನ ತಳಮಳವನ್ನು ಸಹಿಸಲಾಗಲಿಲ್ಲ. ಮುಂದೆ ಇನ್ನೆಂದೂ ಕಳವು ಮಾಡುವುದಿಲ್ಲವೆಂದು ದೃಢನಿಶ್ಚಯ ಮಾಡಿದೆ. ತಂದೆಯವರ ಮುಂದೆ ತಪ್ಪೊಪ್ಪಿ ಕೊಳ್ಳಬೇಕೆಂದು ಅನಿಸುತ್ತಿತ್ತು. ಆದರೆ ಅದರ ಮುಂದೆ ಬಾಯಿ ಬಿಡುವುದೇ ಕಷ್ಟವಾಗಿತ್ತು. ನಮಗೇನೂ ಏಟಿನ ಭಯವಿರಲಿಲ್ಲ. ಅವರು ನಮ್ಮನ್ನು ಎಂದೂ ಹೊಡೆದಿರಲಿಲ್ಲ. ಆದರೆ ನಮ್ಮ ಮಾತಿನಿಂದ ಅವರಿಗೆ ಆಗಬಹುದಾದ ವೇದನೆ, ಸಂತಾಪ, ನಮ್ಮನ್ನು ಹಿಂಜರಿಯುವಂತೆ ಮಾಡುತ್ತಿತ್ತು. ಆದರೂ ಅವರಿಗೆ ಹೇಳಲೇಬೇಕು. ತಪ್ಪೊಪ್ಪಿಕೊಳ್ಳದಿದ್ದರೆ ಆತ್ಮ ಶುದ್ಧಿಗೆ ಬೇರೆ ದಾರಿಯೇ ಇಲ್ಲ ಎಂದು ನಿರ್ಧರಿಸಿದೆ.

ಕೊನೆಗೆ ಮುಖತಃ ಹೇಳದಿದ್ದರೂ ಪರವಾಗಿಲ್ಲ. ಪತ್ರ ಬರೆದು ಕ್ಷಮೆ ಯಾಚಿಸಬೇಕೆಂದು ನಿರ್ಧರಿಸಿದೆ. ಒಂದು ಕಾಗದದಲ್ಲಿ ನನ್ನ ತಪ್ಪುಗಳನ್ನೆಲ್ಲ ಪಟ್ಟಿಮಾಡಿ, 'ನನಗೆ ಶಿಕ್ಷೆ ಕೊಡಿ, ನನ್ನ ಅಪರಾದಕ್ಕಾಗಿ ನೀವು ಆತ್ಮ ದಂಡನೆ ಮಾಡಿಕೊಳ್ಳಬೇಡಿ. ದುಃಖಿಸಬೇಡಿ, ಮುಂದೆ ಇನ್ನೆಂದೂ ಇಂಥ ತಪ್ಪು ಮಾಡುವುದಿಲ್ಲ' ಎಂದು ಬರೆದೆ. ಸ್ವತಃ ಅದನ್ನು ನನ್ನ ತಂದೆಯವರ ಕೈಗಿತ್ತೆ. ಆಗ ಅವರು ಹಾಸಿಗೆ ಹಿಡಿದಿದ್ದರು. ಪತ್ರ ಕೊಡುವಾಗ ನನ್ನ ಕೈಕಾಲು ಹೆದರಿಕೆಯಿಂದ ಕಂಪಿಸುತ್ತಿತ್ತು. ಮರದ ಹಲಗೆಯ ಮೇಲೆ ಅವರ ಹಾಸಿಗೆ ಹಾಸಿತ್ತು. ಕಾಗದವನ್ನು ಅವರ ಕೈಗಿತ್ತು, ಹಲಗೆಯ ಮತ್ತೊಂದು ತುದಿಯಲಿ ಕುಳಿತೆ. ಅವರು ಎದ್ದು ಕುಳಿತು ಕಾಗದ ಓದಿದರು. ಮುತ್ತಿನಂತಹ ಕಣ್ಣೀರು ತೊಟ್ಟಿಕ್ಕಿ ಕಾಗದವನ್ನು ತೋಯಿಸಿತು. ಅವರು ಒಂದರೆಕ್ಷಣ ಕಣ್ಮುಚ್ಚಿ ಕುಳಿತು, ಅನಂತರ ಕಾಗದವನ್ನು ಹರಿದು ಹಾಕಿ ಮತ್ತೆ ಮಲಗಿದರು. ನಾನೂ ಅತ್ತೆ. ನಮ್ಮ ತಂದೆಯವರ ದುಃಖ, ಸಂಕಟವನ್ನು ನನಗೆ ನೋಡಲಾಗಲಿಲ್ಲ. ಅದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ನಾನೊಬ್ಬ ಕಲಾಕಾರನಾಗಿದ್ದರೆ ಆ ಚಿತ್ರವನ್ನು ಬಿಡಿಸಬಹುದಿತ್ತು. ಆ ಕಣ್ಣೀರಿನ ಪ್ರೇಮಧಾರೆ, ನನ್ನ ಪಾಪಗಳನ್ನೆಲ್ಲ ತೊಳೆದು, ಕಲ್ಮಶವನ್ನು ಕೊಚ್ಚಿಹಾಕಿತು. ನಾನು ಪರಿಶುದ್ಧನಾದೆ. ಅಂಥ ಪ್ರೀತಿ ವಾತ್ಸಲ್ಯಗಳು ಅನುಭವಸಿದವನಿಗಷ್ಟೇ ಗೊತ್ತಾಗುವುದು.

ಇದೇ ನನಗೆ ಅಹಿಂಸೆಯ ಮೊದಲ ಪಾಠವಾಯಿತು. ಆಗ ನನಗೆ ಪಿತೃವಾತ್ಸಲ್ಯವನ್ನು ಬಿಟ್ಟು ಬೇರೇನೂ ಕಾಣಲಿಲ್ಲ. ಆದರೆ ಈಗ ಅದು ಶುದ್ಧ ಅಹಿಂಸೆ ಎಂದು ಅರಿವಾಗಿದೆ. ಅಹಿಂಸೆಯ ಶಕ್ತಿಗೆ ಪಾರವೇ ಇಲ್ಲ. ಅದು ವ್ಯಾಪಕವಾದರೆ, ಯಾರೂ ಅದರ ಪ್ರಭಾವದಿಂದ ದೂರ ಉಳಿಯಲಾರರು. ನಮ್ಮ ತಂದೆಗೆ ಇಂಥ ಕ್ಷಮಾಗುಣ ಸ್ವಾಭಾವಿಕವಾಗಿರಲಿಲ್ಲ. ಅವರು ಸಿಟ್ಟಿನಿಂದ ಕೆರಳಿ ಕೆಂಡವಾಗುತ್ತಾರೆ, ಬೈಯುತ್ತಾರೆ, ಕೋಪದಿಂದ ಹಣೆಹಣೆ ಚಚ್ಚಿಕೊಳ್ಳುತ್ತಾರೆ ಎಂದು ನಾನಂದುಕೊಂಡಿದ್ದೆ. ಆದರೆ ಅವರು ಶಾಂತಮೂರ್ತಿಯಾಗಿದ್ದರು. ನಾನು ಪರಿಶುದ್ಧ ಹೃದಯದಿಂದ ತಪ್ಪೊಪ್ಪಿಕೊಂಡಿದ್ದರ ಪರಿಣಾಮ ಇದು, ಎಂದು ನನಗನಿಸಿತು. ಹಿರಿಯರ ಮುಂದೆ ತಪ್ಪೊಪ್ಪಿಕೊಂಡು, ಇನ್ನು ಮುಂದೆ ಎಂದೂ ಅಂಥ ತಪ್ಪುಮಾಡುವುದಿಲ್ಲವೆಂದು ವಾಗ್ದಾನ ಮಾಡುವುದು, ನಿಜವಾದ ಪ್ರಾಯಶ್ಚಿತ್ತ. ನಾನು ಹಾಗೆ ಪ್ರಾಯಶ್ಚಿತ್ತ ಮಾಡಿಕೊಂಡಿದ್ದರಿಂದ ನನ್ನ ತಂದೆ ನನ್ನ ವಿಷಯದಲ್ಲಿ ನಿರಾಳರಾದರು. ನನ್ನ ತಪ್ಪೊಪ್ಪಿಗೆ, ಅವರಿಗೆ ತುಂಬಾ ಸಮಾಧಾನ ತಂದಿತು. ಆಮೇಲೆ ನನ್ನ ವಿಷಯದಲ್ಲಿ ಅವರ ಪ್ರೀತಿವಾತ್ಸಲ್ಯ ಇನ್ನೂ ಹೆಚ್ಚಿತು.

*(ಮುಂದುವರಿಯುವುದು)*

*PAGE DONATED BY : **SMT. SHANTA V. HEGDE,** CARMICHAEL ROAD (DEC.-2011)*

*ಮಕ್ಕಳಿಗಾಗಿ ಶ್ರೀಮದ್ ಭಾಗವತ ಕಥಾ ಭಾಗ-45*

# ಭಾಗವತ ಮಹಾತ್ಮ್ಯೆ

*( ನವಂಬರ್ ಸಂಚಿಕೆಯಿಂದ ಮುಂದು ವರಿದ ಭಾಗ )*

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ| ವಸಂತ ಭಾಗವತ ವೀಣೆ**

***( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರ ಓದಿ ಹೇಳಬೇಕಾಗಿ ವಿನಂತಿ. )***

## ಅಘಾಸುರನ ವಧೆ

ಒಬ್ಬ ಅಸುರನು ಒಂದು ಸ್ಥಳದಲ್ಲಿ ಕೊಲ್ಲಲ್ಪಟ್ಟರೆ ಅಲ್ಲಿ ಸೇಡನ್ನು ತೀರಿಸಿಕೊಳ್ಳಲು ಮತ್ತೊಬ್ಬ ಅಸುರನು ಬರುವುದು ಸಹಜ. ಅಘಾಸುರನು ಪೂತನಿಯ ಬಂಧುವಾಗಿದ್ದನು. ಕಂಸನಿಂದ ಕಳಿಸಲ್ಪಟ್ಟ ಅವನು ಪೂತನಿಯ ಹಾಗೂ ಬಕಾಸುರನ ವಧೆಯ ಸೇಡು ತೀರಿಸಿಕೊಳ್ಳುವುದಕ್ಕಾಗಿ ಕೃಷ್ಣನಲ್ಲಿಗೆ ಬಂದನು. ಕೃಷ್ಣನ ಸಹಿತ ಎಲ್ಲರ ನಾಶ ಮಾಡಬೇಕೆಂದು ದೊಡ್ಡ ಗುಡ್ಡದ ಮಾಯಕ ರೂಪವನ್ನು ತೆಗೆದುಕೊಂಡನು. ಆ ದೊಡ್ಡ ಗುಡ್ಡವು ಅಜಗರದಂತೆ ಕಾಣುತ್ತಿತ್ತು. ಬಾಯಿ ತೆರೆದುಕೊಂಡು ಸುಮ್ಮನೆ ಸರಿದಾಡದೆ ಕುಳಿತಿದ್ದನು. ಗೋಪಾಲರು "ಈ ಗುಡ್ಡವು ಅಜಗರದಂತೆ ಕಾಣುತ್ತಿದೆಯಲ್ಲ. ಇದು ರಾಕ್ಷಸನಾಗಿರಬಹುದು. ರಾಕ್ಷಸನಾದರೆ ಏನಾಯಿತು ? ಕೃಷ್ಣನು ನಮ್ಮ ಸಂಗಡ ಇದ್ದಾನಲ್ಲವೆ ? ಕೃಷ್ಣನಿದ್ದ ಮೇಲೆ ರಾಕ್ಷಸರು ಸಾಯುವರು" ಹೀಗೆ ಮಾತಾಡುತ್ತಾ ಕೃಷ್ಣನು ಏನೊ ಹೇಳುವುದಕ್ಕಿಂತ ಮೊದಲೇ ಅಘಾಸುರನ ಮುಖದಲ್ಲಿ ಆಕಳ ಸಂಗಡ ಹೊಕ್ಕಿಯೇ ಬಿಟ್ಟರು.

ದೈವ ಮಾಡಿದ ಈ ಘಟನೆಯಿಂದ ಶ್ರೀ ಹರಿಯು ವಿಸ್ಮಿತನಾದನು. ಈ ಭಕ್ತರನ್ನು ಮೃತ್ಯುವಿನಿಂದ ಬಿಡುಗಡೆ ಮಾಡಬೇಕೆಂದು ವಿಚಾರ ಮಾಡಿ ಅವನೂ ಅಘಾಸುರನ ಮುಖದಲ್ಲಿ ಹೊಕ್ಕನು. ಕೂಡಲೇ ಅಘಾಸುರನು ತನ್ನ ಕಾರ್ಯ ಪೂರೈಸಿತೆಂದು ಬಗೆದು ತನ್ನ ಬಾಯಿಯನ್ನು ಮುಚ್ಚಿಕೊಂಡನು. ಕೂಡಲೇ ಶ್ರೀಹರಿಯು ತನ್ನ ಶರೀರವನ್ನು ಹಿಗ್ಗಿಸಿಕೊಂಡನು. ಅದರಿಂದ ಅಸುರನ ಉಸಿರು ಕಟ್ಟಿತು. ಅವನು ಕಸಿವಿಸಿ ಪಡಹತ್ತಿದನು. ಕ್ಷಣದಲ್ಲಿ ಅವನು ಪ್ರಾಣಬಿಟ್ಟನು. ಭಗವಂತನ ಸ್ಪರ್ಶದಿಂದ ಅವನ ಪ್ರಾಣಜ್ಯೋತಿಯು ಭಗವಂತನ ಶರೀರದಲ್ಲಿ ವಿಲೀನವಾಯಿತು. ಅವನು ಕೃಷ್ಣರೂಪನಾದನು. ಭಗವಂತನು ಆಕಳುಗಳನ್ನು ಹಾಗೂ ಗೋಪಾಲರನ್ನು ಹೊರಗೆ ತೆಗೆದನು. ಅವರೆಲ್ಲರೂ ಮೃತರಾಗಿದ್ದರು. ಆದರೆ ಭಗವಂತನು ತನ್ನ ಅಮೃತಮಯ ದೃಷ್ಟಿಯಿಂದ ಅವರನ್ನೆಲ್ಲ ನೋಡಲು ಅವರು ಜೀವಂತರಾದರು. ತಾವು ಸತ್ತಿದ್ದೆವು ಎಂಬುದು ಸಹ ಯಾರಿಗೂ ಗೊತ್ತಾಗಲಿಲ್ಲ. ಎದುರಿಗೆ ಪರ್ವತದಷ್ಟು ದೊಡ್ಡ ಅಜಗರ ಸತ್ತು ಬಿದ್ದಿತ್ತು. ಅಘಾಸುರನು ಸತ್ತದ್ದನ್ನು ನೋಡಿ ಸ್ವರ್ಗದಲ್ಲಿ ವಾದ್ಯಗಳು ಮೊಳಗಿದವು. ಜಯಜಯಕಾರವನ್ನು ಕೇಳಿ ಬ್ರಹ್ಮನೂ ಕೆಳಗೆ ಬಂದು ಪ್ರಚಂಡ ಅಸುರನ ವಧೆ ನೋಡಿ ವಿಸ್ಮಿತನಾದನು. ಅವನು ಭಗವಾನ್ ಕೃಷ್ಣ ಹಾಗೂ ಗೋಪಾಲರನ್ನು ನೋಡುತ್ತಲಿದ್ದನು.

ಅಘಾಸುರನ ವಧೆ ಆದ ಮೇಲೆ ಗೋಪಾಲರು ಯಮುನೆಯ ತೀರಕ್ಕೆ ಆಟವಾಡಲು ಹೋದರು. ನಂತರ ಊಟಕ್ಕೆ ಕುಳಿತರು. ಎಲ್ಲರೂ ತಮ್ಮ ತಮ್ಮ ಗಂಟುಗಳನ್ನು ಬಿಚ್ಚಿದರು. ಶ್ರೀಕೃಷ್ಣನು ಗೋಪಾಲರಿಂದ ಬಾಳೆ ಹಾಗೂ ಆಲದ ಎಲೆಗಳನ್ನು ತರಿಸಿ, ದೊಡ್ಡದೊಂದು ಎಲೆಯನ್ನು ತಯಾರಿಸಿ, ಎಲ್ಲರ ಬುತ್ತಿಯನ್ನು ಸುರುವಿದನು. ಹಾಗೂ ತನ್ನ ಗಂಟನ್ನೂ ಬಿಚ್ಚಿ ಅದರಲ್ಲಿ ಸುರುವಿದನು. ಎಲ್ಲವನ್ನೂ ಕೂಡಿಸಿ ಕಲಸಿದನು. ಎಲ್ಲರನ್ನೂ ವರ್ತುಲಾಕಾರವಾಗಿ ಕೂರಿಸಿ, ಸ್ವಹಸ್ತದಿಂದ ತಾನೇ ತಯಾರಿಸಿದ ಗೋಪಾಲ ಕಾಲಾವನ್ನು ಪ್ರತಿಯೊಬ್ಬರ ಕೈಯ ಮೇಲೆ ಒಂದೊಂದು ಮುದ್ದೆ ಇಟ್ಟು ಭೋಜನ ಮಾಡಲು ಹೇಳಿದನು. ಆಗ ಗೋಪಾಲರು "ನಾವೆಲ್ಲ ಇಲ್ಲಿ ಊಟಕ್ಕೆ ಕುಳಿತರೆ ಆಕಳು ಹಾಗೂ ಕರುಗಳು ಎಲ್ಲಿಯಾದರೂ ದೂರ ಹೋದರೆ ಏನು ಗತಿ ?" ಎಂದು ಕೇಳಿದರು. ಆಗ ಕೃಷ್ಣನು "ನೀವೆಲ್ಲರೂ ನಿಶ್ಚಿಂತೆಯಿಂದ ಊಟ ಮಾಡಿರಿ. ನಾನು ಆಕಳುಗಳ ಕಡೆ ಲಕ್ಷ್ಯವಿಡುತ್ತೇನೆ"ಂದು ಹೇಳಿ ಎದ್ದು ನಿಂತನು. ಆಗ ಅವನ ನೋಟವನ್ನು ನೋಡಬೇಕಾಗಿತ್ತು. ಎಡಗೈಯಲ್ಲಿ ಗೋಪಾಲಕಾಲಾ, ಹೆಗಲ ಮೇಲೆ ಕಂಬಳಿ ಹಾಗೂ ಬಲಗೈಯಲ್ಲಿ ಕೋಲು ಹಾಗೂ ಟೊಂಕಕ್ಕೆ ಕೊಳಲು! ನಂತರ ತಾನೇ ಸ್ವತಃ ಗೋಪಾಲರಿಗೆ ಭೋಜನ ಬಡಿಸುತ್ತಿದ್ದನು. ಹೀಗೆ ಇಷ್ಟ ಮಿತ್ರರಿಂದೊಡಗೂಡಿ, ಸರ್ವರೂ ವನ ಭೋಜನ ಮಾಡುವ ಯೋಜನೆಯು ಗೋಪಾಲನದಾಗಿತ್ತು. ಈ ದೃಶ್ಯವನ್ನು ನೋಡಿ ಇಂದ್ರಾದಿ ದೇವತೆಗಳೂ ಕೂಡ ತನಗೆ ಈ ಚಿನ್ಮಯ ಹಸ್ತದಿಂದ ಊಟ ಮಾಡುವ ಯೋಗವಿಲ್ಲವೆಂದು ಹಳಹಳಿಸುತ್ತಿದ್ದರು ಹಾಗೂ ಗೋಪಾಲರು ಕೈ ತೊಳೆಯುವಾಗ, ಅದರ ನೀರನ್ನಾದರೂ ಸೇವಿಸಬೇಕೆಂದು, ಯಮುನೆಯಲ್ಲಿ ಜಲಚರಗಳಾಗಿ ಕೂತರು. ಗೋಪಾಲರೆಲ್ಲರೂ ಕೃಷ್ಣನು ಕೊಟ್ಟಿದ್ದ ಭೋಜನವನ್ನು ಮತ್ತೂ ಬೇಕು ಮತ್ತೂ ಬೇಕು. ಅಮೃತಕ್ಕಿಂತ ಸವಿಯಾಗಿದೆ ಎನ್ನುತ್ತ ತೃಪ್ತಿಯಿಂದ ಊಟ ಮಾಡಿದರು. ಊಟವಾದ ಮೇಲೆ ಕೃಷ್ಣನು "ನೀವು ಕೈ ತೊಳೆಯಲು ಯಮುನೆಗೆ ಹೋಗಬೇಡಿರಿ. ನಿಮ್ಮ ಬಟ್ಟೆಗೆ ಒರೆಸಿಕೊಂಡು ಬಿಡಿರಿ" ಎಂದು ಹೇಳಿದಾಗ, ಗೋಪಾಲರು ಹಾಗೆಯೇ ಮಾಡಿದರು. ಯಮುನೆಯಲ್ಲಿದ್ದ ದೇವತೆಗಳು ತಮಗೆ ಒಂದು ಅಗಳೂ ಸಿಗಲಿಲ್ಲವೆಂದು ನಿರಾಶರಾದರು.

ಅಷ್ಟರಲ್ಲಿ ಹಸಿರು ಹುಲ್ಲಿನ ಆಶೆಯಿಂದ ಗೋವುಗಳು ಮೇಯುತ್ತಾ ಮೇಯುತ್ತ ಬಹು ದೂರ ಹೋಗಿ ಬಿಟ್ಟವು. ಆಕಳುಗಳನ್ನು ಕಾಣದೆ ಗೋಪಾಲರು ಹೆದರಿದರು. ಆಗ ಕೃಷ್ಣನು "ನೀವು ಚಿಂತಿಸಬೇಡಿರಿ. ಸಾವಕಾಶವಾಗಿ ಊಟ ಮಾಡಿರಿ. ನಿಮ್ಮೆಲ್ಲರ ಗೋಗಳನ್ನು ಹಾಗೂ ಕರುಗಳನ್ನು ನಾನು ಹೊಡೆದುಕೊಂಡು ತರುವೆನು" ಎಂದು ಹೇಳಿ ಕೈಯಲ್ಲಿ ಗೋಪಾಲ ಕಾಲ ಸಹಿತ ಗೋ ಶೋಧನೆಗಾಗಿ ಹೊರಟನು. ಅಷ್ಟರಲ್ಲಿ ಇದನ್ನೆಲ್ಲ ನೋಡುತ್ತಿದ್ದ ಬ್ರಹ್ಮನಿಗೆ ದುರ್ಬುದ್ಧಿಯು ಬರಬೇಕೆ ? ಶ್ರೀಹರಿಯ ಸಾಮರ್ಥ್ಯವನ್ನು ಪರೀಕ್ಷಿಸಲಿಕ್ಕಾಗಿ ಶ್ರೀಹರಿಯು ಗೋ ಶೋಧನೆಗಾಗಿ ಹೋದಾಗ ಇತ್ತ ಕಡೆಗೆ ಸರ್ವ ಗೋಪಾಲರನ್ನು ಎತ್ತಿಕೊಂಡು ಸತ್ಯಲೋಕಕ್ಕೆ ಒಯ್ದು ಇಟ್ಟನು. ಹಾಗೂ ಮಾಯಾಪಾಶದಲ್ಲಿ ಮಲಗಿಸಿ ಬಿಟ್ಟನು. ಗೋಗಳನ್ನೂ ಹೊಡೆದು ಕೊಂಡು ಶ್ರೀಕೃಷ್ಣನು ಬಂದು ನೋಡುವಷ್ಟರಲ್ಲಿ ಗೋಪಾಲರು ಕಾಣಲೊಲ್ಲರು. ಅವನು ಗೋಪಾಲರನ್ನು ಶೋಧಿಸುವಷ್ಟರಲ್ಲಿ ಬ್ರಹ್ಮನು ಸರ್ವ ಗೋ-ಕರುಗಳನ್ನು ಎತ್ತಿಕೊಂಡು ಸತ್ಯಾಲೋಕಕ್ಕೆ ಹೋಗಿ ಅಲ್ಲಿ ಮಲಗಿಸಿಬಿಟ್ಟನು.

ಶ್ರೀಕೃಷ್ಣನು ಗೋಪಾಲರಿಲ್ಲವೆಂದು ಗೋಗಳ ಕಡೆಗೆ ಹಿಂತಿರುಗಿ ಬರಲು ಗೋಗಳೂ ಕೂಡ ಅದೃಶ್ಯ! ಅವನು ಏನು ಮಾಡುತ್ತಾನೆಂದು ನೋಡಲು ಬ್ರಹ್ಮನು ಅಡಗಿಕೊಂಡು ಕುಳಿತನು. ಕ್ಷಣದಲ್ಲಿ ಭಗವಂತನಿಗೆ ಇದು ತನ್ನ ಚಿರಂಜೀವ ಸುಪುತ್ರನ ಕುಚೇಷ್ಟೆಯೆಂದು ಅರಿವಾಯಿತು. ಮಗನು ತಂದೆಯ ಪರೀಕ್ಷೆ ತೆಗೆದುಕೊಳ್ಳಲು ಬಂದಿದ್ದಾನೆ! ಮಗನಿಗೆ ಇನ್ನೂ ತಿಳುವಳಿಕೆ ಬರಲಿಲ್ಲವಲ್ಲ! "ನಿನ್ನಂಥ ಎಷ್ಟೋ ಬ್ರಹ್ಮದೇವರು ಹಾಗೂ ಎಷ್ಟೋ ಬ್ರಹ್ಮಾಂಡಗಳು ನನ್ನ ರೋಮ ರೋಮಗಳಲ್ಲಿ ತಿರುಗುತ್ತಲಿವೆ. ಮೂರ್ಖಾ! ನಿನಗೆ ನಾಲ್ಕು ಮುಖಗಳಿದ್ದರೂ ಕೂಡ, ಒಂದು ತಲೆಯಲ್ಲೂ ಇಷ್ಟು ವಿಚಾರ ಬರಲಿಲ್ಲವಲ್ಲ!" ಹೀಗೆಂದು ಸರ್ವವ್ಯಾಪ್ತಿ ಭಗವಾನ್ ಶ್ರೀ ಹರಿಯು ತಕ್ಷಣ ಅನಂತರೂಪ ಧಾರಣ ಮಾಡಿದನು.

*(ಮುಂದುವರಿಯುವುದು)*

*PAGE DONATED BY : **SHRI SUHAS GUNISHASTRI**, PRABHADEVI IN THE MEMORY OFHIS PARENTS **LATE SMT. RAJESHWARI & LATE SHRI P. V. GUNISHASTRI** , PAST PRESIDENT, H.W.T. (DEC.-2011)*

# ವಾರ್ಷಿಕ ಪಿಕ್‌ನಿಕ್

ನಮ್ಮ ಸಂಸ್ಥೆಯ ಈ ವರ್ಷದ ಮೊದಲ ಕಾರ್ಯಕ್ರಮವಾದ ಪಿಕ್‌ನಿಕ್ಕ್‌ನ್ನು ಜನವರಿ 16ರಂದು ಮನರ್‌ದಲ್ಲಿ ವೈತರಣಾ ಡೆಹರೆಜಾ ನದಿಯ ಸಂಗಮ ಸ್ಥಳದಲ್ಲಿರುವ "Silent Hill Resort" ನಲ್ಲಿ ಏರ್ಪಡಿಸಲಾಗಿತ್ತು. ದೂರದ ಪನವೇಲ್, ಡೊಂಬಿವಿಲಿ ಹಾಗೂ ಬಾಂದ್ರದಲ್ಲಿ ಹವ್ಯಕ ಬ್ಯಾನರ್‌ಗಳನ್ನು ಅಂಟಿಸಿಕೊಂಡ ಬಸ್ಸುಗಳು ಹವ್ಯಕ ಬಾಂಧವರನ್ನು ಪಿಕ್‌ನಿಕ್‌ನ ಸ್ಥಳಕ್ಕೆ ಕರೆದೊಯ್ಯಲು ಮುಂಜಾನೆಯ ಹೊತ್ತಿಗೆ ಸಜ್ಜಾಗಿ ನಿಂತಿತ್ತು. ಬಾಂದ್ರದಿಂದ ಹೊರಟ ಬಸ್ಸು ಹವ್ಯಕರಿಂದ ಕಿಕ್ಕಿರಿದು ತುಂಬಿತ್ತು. ಹಿರಿಯರು, ಕಿರಿಯರು ಎನ್ನದೇ ಎಲ್ಲರೂ ಬಸ್ಸಿನಲ್ಲಿ ಅಂತಾಕ್ಷರಿ ಹಾಡುತ್ತಾ ಹಾಗೂ ಜೋಕುಗಳನ್ನು ಹೇಳುತ್ತಾ ಸಾಗಿದ್ದರು.

ಪಿಕ್‌ನಿಕ್‌ನ ತಾಣಕ್ಕೆ ತಲುಪಿದೊಡನೆ ಬಿಸಿಬಿಸಿ ಉಪ್ಪಿಟ್ಟು, ಇಡ್ಲಿ ಸಾಂಬಾರ್ ಸಂಗಡ ಜಿಲೇಬಿ, ಪಾಪಡ್ ಕಾದಿತ್ತು. ಜೊತೆಗೆ ಚಹ, ಕಾಫಿ, ಬೇರೆ. ಮುಂಜಾನೆಯ ಚಳಿಗೆ ಹಿತ ನೀಡಿತ್ತು. ಉಪಹಾರ ಸೇವನೆಯ ನಂತರ ನಮ್ಮ ಬಾಂಧವರೆಲ್ಲಾ ಮಂಟಪ ನಂ. 1ರಲ್ಲಿ ಸೇರಿದರು. ಶ್ರೀಮತಿ ಅಪರ್ಣಾ ಭಟ್‌ರವರ ಪ್ರಾರ್ಥನೆಯೊಂದಿಗೆ ಅಂದಿನ ಕಾರ್ಯಕ್ರಮ ಪ್ರಾರಂಭವಾಯಿತು.

ಇಂಗ್ಲಿಷ್ ಅಕ್ಷರಗಳನ್ನು ಜೋಡಿಸಿ ಶಬ್ಧ ರಚಿಸುವ ಆಟದಲ್ಲಿ ಎಲ್ಲರೂ ಭಾಗವಹಿಸಿ ಆನಂದಿಸಿದರು. ನಂತರ ಊಟದ ಹೊತ್ತಿಗೆ ಸೇರುವ ಭರವಸೆಯೊಂದಿಗೆ ಎಲ್ಲರೂ ರಮಣೀಯವಾದ ಸಂಗಮಸ್ಥಳ ಹಾಗೂ ಸುಂದರವಾದ ರಿಸೋರ್ಟ್‌ನ್ನು ಸುತ್ತಾಡಿ ಬರಲು ಹೊರಟರು.

ಊಟದ ಹೊತ್ತಿಗೆ ಎಲ್ಲರೂ ಮತ್ತೆ ಒಂದುಗೂಡಿದರು. ರುಚಿ, ಶುಚಿಯಾದ ಊಟದ ನಂತರ ಮಂಟಪ ನಂ. 1ರಲ್ಲಿ ಎಲ್ಲರೂ ಸೇರಿದರು. ಮಕರ ಸಂಕ್ರಾಂತಿಯ ನಿಮಿತ್ತವಾಗಿ ಮಹಿಳೆಯರಿಗೆ ಹಳದಿ-ಕುಂಕುಮ, ಹೂವು ಎಳ್ಳು-ಬೆಲ್ಲ ಹಾಗೂ ಕಿರು ಕಾಣಿಕೆಯನ್ನು ನೀಡಲಾಯಿತು. ಎಳ್ಳು-ಬೆಲ್ಲದ ವಿತರಣೆಯ ಜೊತೆಗೆ ನಮ್ಮೆಲ್ಲರ ಸಂಬಂಧ ಸಿಹಿಯಾಗಿ ಸ್ಥಿರವಾಗಿ ಇರಲಿ ಎನ್ನುವ ಸಂದೇಶವನ್ನು ನೀಡಿದರು.

ನಂತರ ಚಿಕ್ಕ ಮಕ್ಕಳಿಗೆ ಆಹಾರ ಧಾನ್ಯಗಳನ್ನು ಗುರುತಿಸುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳಿಗಿಂತ ತಾಯಂದಿರೇ ಈ ಆಟದಲ್ಲಿ ಹೆಚ್ಚಿನ ಉತ್ಸಾಹ ತೋರಿದರು. ದೊಡ್ಡ ವಯಸ್ಸಿನ ಮಕ್ಕಳಿಗೆ Body Jump ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ನಂತರದ ಆಟ ಪುರುಷರದ್ದು Passing the Rubberband. ಒಬ್ಬರಿಗೊಬ್ಬರು rubber bandನ್ನು ಸ್ಟ್ರಾದ ಮೂಲಕ ಪಾಸ್ ಮಾಡುವಾಗ ತಾಯಿ ಹಕ್ಕಿ ಮರಿ ಹಕ್ಕಿಗೆ ಗುಟುಕು ನೀಡುತ್ತಿರುವಂತೆ ಕಂಡರು. ಕಣ್ಣು ಕಟ್ಟಿಕೊಂಡ ಹೆಂಗಸರು ಚೆಂಡನ್ನು ಆರಿಸಿತರುವ ಆಟ ಆಡುವಾಗ ಪ್ರೇಕ್ಷಕರನ್ನು ರಂಜಿಸಿದರು.

ಬಿಸಿ ಬಿಸಿಯಾದ ಚಹಾ ಸೇವನೆಯ ನಂತರ ಗರಂ ಗರಂ ಹೌಸೀ ಆಟ ಆಡಲಾಯಿತು. ಕೊನೆಯಲ್ಲಿ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆಯವರು ನಡೆಸಿಕೊಟ್ಟರು. ಕುಟುಂಬ ಸಮೇತರಾಗಿ ಬಂದ ಪ್ರತಿಯೊಂದು ಕುಟುಂಬಕ್ಕೂ ನೆನಪಿನ ಕಾಣಿಕೆಯನ್ನು ನೀಡಲಾಯಿತು. ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಹವ್ಯಕರ ನೆನಪಿನಲ್ಲಿ ಉಳಿಯುವಂತಹ ಒಂದು ಸ್ಮರಣೀಯ ಸುಂದರ ದಿನ ಮುಕ್ತಾಯಗೊಂಡಿತು.

ನಿರೀಕ್ಷೆಗೂ ಮೀರಿ (165ಕ್ಕಿಂತ ಹೆಚ್ಚು) ಹವ್ಯಕರು ಪಿಕ್‌ನಿಕ್‌ನಲ್ಲಿ ಪಾಲ್ಗೊಂಡಿದ್ದು ಸಂತಸದ ಸಂಗತಿ. ಮುಂದಿನ ವರ್ಷ ಬೇರೊಂದು ಸ್ಥಳದಲ್ಲಿ ಆದರೆ ಇದೇ ಉತ್ಸಾಹ ಖುಷಿಯ ಜೊತೆ ಸೇರುವ ಭರವಸೆಯೊಂದಿಗೆ ಒಬ್ಬರಿಗೊಬ್ಬರು ವಿದಾಯ ಹೇಳಿದರು.

*ವರದಿ : ಶಶಿಕಲಾ ಹೆಗಡೆ*

**SPONSOR FOR THE PICNIC**

| | | |
|---|---|---|
| 01. | Shri N. R. Hegde | Rs. 2000/- |
| 02. | Smt. Sunand R. Bhat | Rs. 1000/- |
| 03. | Shri G. V. Hegde | Rs. 1000/- |
| 04. | Smt. Vimala Bhat | Rs. 1000/- |
| 05. | Shri Narayan Akadas | Rs. 1000/- |
| 06. | Smt. Sushila V. Hegde | Rs. 1000/- |
| 07. | Shri Rokesh G. Hedge | Rs. 1000/- |
| 08. | Shri S. M. Hegde | Rs. 1000/- |
| 09. | Smt. Sushila V. Bhagwat | Rs. 1000/- |
| 10. | Shri Shivkumar Bhagwat | Rs. 1000/- |
| 11. | Miss Chetana Bhat | Rs. 500/- |
| 12. | Miss Tanuja Upadhyaya | Rs. 500/- |
| 13. | Shri K. C. Hegde | Rs. 500/- |
| 14. | Smt. Tanuja Hegde | Rs. 500/- |
| 15. | Shri Ramesh Bhat | Rs. 500/- |
| 16. | Shri S. N. Joshi | Rs. 500/- |
| 17. | Shri Gurudevprasad K. Hegde | Rs. 500/- |
| 18. | Shri Vinay Bhat | Rs. 500/- |
| 19. | Shri Mahesh Kalan | Rs. 500/- |
| 20. | Shri S. S. Hegde | Rs. 500/- |

**TotalRs. 16,000/-**

**PRIZE WINNERS OF THE PICNIC**

1. **Jr.kg to IInd Std. Pulses Identification**
   Ist Prize - Kumari Niyati V. Bhat
   IInd Prize-Master Atharv B. Bhat
2. **IIIrd Std. Xth Std.- Body Jump**
   Team Leader : Sushaant Bhat
   Team Member - Miss Shruti Bhat, Miss Shreya Hegde, Master Shreyas Bhat, Master Preetham Satish Rao, Master Neeraj Bhagwat, Miss Divya, Miss Varshini Rao, Miss Priyanka Iyer,.
3. **Men-Passing the Rubberband**
   Team Leader : Mr. Satishkumar KC
   Team Members : Mr. K. G. Hegde, Mr. Rokesh Hegde, Mr. Ramesh Bhat, Mr. Sanjay Bhat, Mr. S. S. Hegde, Mr. A. G. Bhat, R. G. Bhat, Mr. Ganesh Bhat, Mr. Narayan Akadas.
4. **Ladies Blind fold Ball Hunting**
   Team Leader : Smt. Aparna Bhat
   Team Members : Smt.Chitkala Kalan, Smt. Vasudha Hegde, Smt. Sandhya Bhat, Smt. Madhuri Hegde, Smt. Vanita Bhat, Smt. Sushma Hegde, Smt. Nidhi Hegde, Smt. Pushpa Bhat, Miss Chetana Bhat.

*PAGE DONATED BY : **SHRI V. G. BHAT, NIGDI** (DEC.-2010)*

# ನನ್ನ ಅನಿಸಿಕೆ

- ಗಂಗಾ ಗಣೇಶ್ ಬಗ್ಗೋಣ್

ಸಪ್ಟೆಂಬರ್ ತಿಂಗಳದ ಸಂಪಾದಕೀಯ ದೂರದವರು ಹತ್ತಿರ, ಹತ್ತಿರವಿರುವವರೇತಕೆ ದೂರ ಓದಿ ನನಗೆ ತುಂಬ ಖುಷಿಯಾಯಿತು. ಇದು ತುಂಬ ನಿಜವಾದ ವಿಷಯ. ನನ್ನ ಮನಸ್ಸಿನಲ್ಲಿಯೂ ಆಗಾಗ ಬರುತ್ತಿದ್ದ ವಿಚಾರವನ್ನು ಶ್ರೀಮತಿ ಅಮಿತಾ ಭಾಗವತ ಅವರು ತುಂಬ ಸರಳ ಭಾಷೆಯಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾರೆ. ಅವರಿಗೆ ಧನ್ಯವಾದಗಳು.

ಕಾಲ ಬದಲಾಗುತ್ತದೆ. ನಾವು ಬದಲಾಗಬೇಕು. ನಿಜ ನಮ್ಮಲ್ಲಿ ಗಾದೆಯೇ ಇದೆಯಲ್ಲ.

'ಕಾಲಕ್ಕೆ ತಕ್ಕಂತೆ ಬದಲಾಗು, ತಾಳಕ್ಕೆ ತಕ್ಕಂತೆ ಕುಣಿದಾಡು'

ಅದು ನಿಜ ಆದರೆ ಅದಕ್ಕೆ ಒಂದು ಮಿತಿ ಇರಬೇಕಲ್ಲವೆ? ಯಾವುದೂ ಮಿತಿ ಮೀರಬಾರದು. ಈಗಲೇ ನಾವು ಹೀಗೆ ನೋಡುತ್ತಿದ್ದೇವೆ. ಇಂದಿನ ಪುಟ್ಟ ಮಕ್ಕಳ ಅವಸ್ಥೆ ಏನಾಗಬಹುದು? 3 ವರ್ಷವೂ ತುಂಬದ ಮಗುವು ಪ್ಲೇ ಗ್ರೂಪ್ ನರ್ಸರಿ ಎನ್ನುತ್ತ ಸ್ಕೂಲಿಗೆ ಹೋಗಲು ಶುರುವಾಗುವದು. ಇನ್ನೂ ತೊದಲು ನುಡಿಯಾಡುವಾಗಲೇ ಅದು ಇಂಗ್ಲೀಷಿನಲ್ಲಿ ಮಾತಾಡಬೇಕು.

ಅಪ್ಪ, ಅಮ್ಮ, ಆಯಿ ಎನ್ನುವ ಬದಲು ಮಮ್ಮಿ, ಡ್ಯಾಡಿ, ಮೋಮ್, ಡ್ಯಾಡ್, ಅನ್ನಬೇಕು. ನಂತರ ಸ್ಕೂಲ್ ಎಡ್ಮಿಶನ್ ಪೈಪೋಟಿ ಹೆಚ್ಚು, ಹೆಚ್ಚು ಫೀಸ್ ತೆಗೆದುಕೊಳ್ಳುವದು, ಒಂದಿಷ್ಟು ಎಕ್ಟಿವಿಟಿ ಲೀಸ್ಟ್, ಫೆಸಿಲಿಟಿ ಎಂದು ತೋರಿಸಿ ಹಣ ವಸೂಲಿ ಮಾಡುತ್ತಾರೆ. ಅಂತಹ ಸ್ಕೂಲುಗಳಿಗೇ ಮಕ್ಕಳನ್ನು ಸೇರಿಸಬೇಕೆನ್ನುವದು ಇಂದಿನ ಜನರ ಭಾವನೆ. ಸ್ಕೂಲಿನಿಂದ ಮಕ್ಕಳ ವ್ಯಕ್ತಿತ್ವ ರೂಪಿತವಾಗುತ್ತದೆ ಎನ್ನುವ ಭ್ರಮೆಯಲ್ಲಿ ಅವರಿದ್ದಾರೆ. ಆದರೆ ಒಮ್ಮೆ ಯೋಚಿಸುವದಿಲ್ಲ. ನಮ್ಮ ಹಿರಿಯರು ಹೇಳಿದಂತೆ-

''ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು
ಜನನಿಯಿಂದ ಪಾಠ ಕಲಿವ ಜನರು ಧನ್ಯರು''

ಇಂದು ಧನ್ಯರ ಬದಲು ದಡ್ಡರೆಂಬಂತಾಗಿದೆ. ಯಾಕೆಂದರೆ ಟ್ಯೂಶನ್ ಕ್ಲಾಸ್‌ಗಳಿಗೆ 2-3 ವರ್ಷಗಳಾಗುವ ಮಗುವಿಗೇ ಟ್ಯೂಶನ್ ಶುರುವಾಗುವುದು. ಹತ್ತಿರದ ಶಾಲೆಗಳಿಗೆ ಕಳಿಸಿ, ತಾಯಂದಿರೇ ಸ್ಕೂಲಿಗೆ ಮಗುವನ್ನು ಕಳಿಸಿ ಕರೆತಂದರೆ ಕಡಿಮೆ ಗ್ರೇಡಾಗುತ್ತದೆ. ದೂರದ ಶಾಲೆಗಳಿಗೆ ಬಸ್ಸಿನಲ್ಲಿ ಹೋಗಿ ಬರುತ್ತಾರೆಂದರೆ ಅವರಿಗೆ ಏನೋ ಸಮಾಧಾನವೋ, ಹಿರಿಮೆಯೋ ಆ ಪುಟ್ಟ ಮಕ್ಕಳು ಅದರಲ್ಲಿ ಎಷ್ಟು (ಹಿಂಸೆ) ತೊಂದರೆ ಪಡುವರು ಎನ್ನುವ ಅರಿವಿಲ್ಲ.

ಶಾಲೆಗಳಿಂದ ಮಕ್ಕಳ ವ್ಯಕ್ತಿತ್ವ (ಪರ್ಸನಾಲಿಟಿ) ಆಗುತ್ತದೆ ಎನ್ನುವದು ಇವರ ಭಾವನೆ. ಆದರೆ ಒಮ್ಮೆ ಯಾಕೆ ಯೋಚಿಸುವದಿಲ್ಲ? ವರ್ಷದ 365 ದಿನಗಳಲ್ಲಿ ಎಷ್ಟು ದಿನಗಳು ಮಕ್ಕಳು ಶಾಲೆಗೆ ಹೋಗುವರು, ದಿನದ ಒಟ್ಟು ಗಂಟೆ (ತಾಸು) ಶಾಲೆಯಲ್ಲಿ ಇರುವರು. ಶಾಲೆಗಳಿಗಿಂತ ಮನೆಯಲ್ಲೆ ಮಕ್ಕಳ ವ್ಯಕ್ತಿತ್ವ ವಿಕಾಸವಾಗುವುದು. ಪಾಲಕರು ಮಕ್ಕಳಿಗೆ ಸ್ವಲ್ಪವಾದರೂ ಸಮಯ ಕೊಡಬೇಕು. ಆದರೆ ಅದು ಕ್ವಾಂಟಿಟಿ ಟ್ಯಾಮ್ ಆಗುವದಿಲ್ಲ. ಕ್ವಾಲಿಟಿ ಟ್ಯಾಮ್ ಆಗಬೇಕು. ಅದರಲ್ಲಿ ಮಕ್ಕಳಿಗೆ ಹೆಚ್ಚಿನ ಲಾಭವಿದೆ. ಮಕ್ಕಳೂ ಅದನ್ನೇ ಬಯಸುತ್ತಾರೆ.

ಇನ್ನೊಂದು ಕಂಪ್ಯೂಟರ್, ಮೊಬ್ಯಾಲ್ ಮನುಷ್ಯನ ಒಂದು ಅಂಗವೇ ಆಗಿದೆ ಎಂಬಂತಾಗಿದೆ. ಮೊಬ್ಯಾಲ್ ಉಪಯೋಗಿಸದವರು ಹ್ಯಾಂಡೀಕೇಪ್ ಎನ್ನುವ ಮಟ್ಟಿಗೆ ಬಂದಿದೆ. ಯಾಕೆಂದರೆ ಅವರ ಒಂದು ಕೈ ಮೊಬ್ಯಾಲ್ ಮೇಲೆ ಇರುತ್ತದೆ. ಇಂದು ಮನೆಕೆಲಸ ಮಾಡುವವರು, ಕಸಗುಡಿಸುವವರು, ಅಂಗಡಿಗಳಲ್ಲಿ ಕೆಲಸ ಮಾಡುವ ಹುಡುಗರು ಇದನ್ನು ಉಪಯೋಗಿಸುತ್ತಾರೆ. ಅದರ ಅವಶ್ಯವಿದೆಯೋ ಇಲ್ಲವೋ ಗೊತ್ತಿಲ್ಲ. ಒಬ್ಬ ಗೃಹಣಿಯು ಕೂಡ ಇದನ್ನು ಇಟ್ಟುಕೊಳ್ಳಬೇಕು. ಅದು ನಮ್ಮ ಉಸಿರೇ ಆಗಿದೆ, ಎನ್ನುವ ಹಂತ ತಲುಪಿದೆ. ಇನ್ನು ಸ್ವಲ್ಪವೇ ವರ್ಷಗಳಲ್ಲಿ ಯಾವ ರೀತಿಯ ಬದಲಾವಣೆ ಬರುವದೋ ಆ ದೇವರೇ ಬಲ್ಲ. ಏನೂ ಹೇಳುವಂತಿಲ್ಲ. ●

---

# ಗೆಳತಿ

- ದಾಕ್ಷಾಯಣಿ ಯೆಡಳ್ಳಿ

ಶತಮಾನಗಳಿಂದ ಕಾಯುತಿರುವೆ ಗಳತಿ
ಕೈಯ ಬಡಿದು ಹೊರನಡೆದೆ ನೀನಾರ ಜೊತೆ
ನಿನ್ನ ರಭಸ ನಡಿಗೆ ಕೊಡವಿಕೊಂಡೆದ್ದೆ
ತಡಬಡಿಸದೆ ನಿದ್ದೆ ಹಿಂದಿಟ್ಟು ಹೋದೆ ॥

ಸರೋವರದ ತಟದಿ ಅಕ್ಷಿಗಳು ದಿಗಂತದವರಗೆ
ಹಂಸದಂತೆ ತೇಲಿ ಬರುತಿದ್ದೆ ಭುವಿಯೆಡೆಗೆ
ಬಕವು ಬಂದಿತ್ತು, ಮೀನು ನುಂಗುತ ನೀರಲಿ
ದೃಷ್ಟಿ ಮಂಜಾಯಿತು ಬಾರದಿಹ ದಾರಿಯಲ್ಲಿ ॥

ಮಾವಿನ ತೋಪಲಿ ಪಂಚಮದ ಸ್ವರವಾದೆ
ಇಂಚರವ ಕೇಳುತ ಗಿಡ ಗಿಡ ಹುಡುಕಾಡಿದೆ
ಕಾಗೆ ಕುಕ್ಕಲು ನೆತ್ತಿ ಧೃಡತೆ ಬಿತ್ತು ನೆಲಕೆ
ಒಲದಿಲ್ಲ ದಾಟದಲಿ ಬೀಳುತೇಳುವ ಬಯಕೆ ॥

ಕುಸುಮದ ಸೌರಭವ ಸೂರಗೊಳ್ಳ ದುಂಬಿಯೋ
ಹಸನಾದ ಧರೆಯೆದೋ ಬಿಸಿಗಾಳಿ ಬಲವಿದೋ
ಮಿಡಿತೆಯ ಆಕ್ರಮಣದಿ ಕುಸಿಯುವ ದಳಗಳು
ಹೊಂಗನಸು ಉದುರಿದ ಕಸವಾಯ್ತು ಎಲೆಗಳು ॥

ಊರು ಕೇರಿಗಳಲಿ ಏರು ತಗ್ಗುಗಳಲಿ
ಬಡನಿದ್ದ ಶ್ವಾನದ ಸ್ವಾಮಿಭಕ್ತಿಯ ತೆರದಿ
ಇಡುತಿಜ್ಜೆ ಹೆಜ್ಜೆಗಳ ನಿನ್ನಾಸೆಯಾತುರದಿ
ಅಡ್ಡವಾಯಿತು ಕರಿಬೆಕ್ಕು ದಿಟ್ಟಿಸುತ ಹಸಿರ ಕಂಗಳಲಿ ॥

ಬೇಡ ಗಳತಿ ನಿನ್ನನುಪಸ್ಥಿತಿಯಿಂದೇನಿಲ್ಲ ಕೊರತೆ
ಕವಲು ನೆಳಲಿಗೆ ಕನಸೊಂದ ಹೆಕ್ಕುವ ಭ್ರಾಂತೆ
ದಾರಿ ಕಾಯುತ್ತಾ ಚೆನ್ನಾ ಕೇಳಬೇಡೀ ಬನ್ನಾ
ಕಾಯಿಸುತ್ತಿದ್ದ ಹಾಲು ಸುಟ್ಟು ಕರಕಾದರೇನಿನ್ನಾ ॥ ★

---


## ವರ ಬೇಕಾಗಿದ್ದಾನೆ

ದಕ್ಷಿಣ ಕನ್ನಡ ಪುತ್ತೂರು ತಾಲೂಕಿನ ಹವ್ಯಕ ಮನೆತನದ, ಜಮದಗ್ನಿ ಗೋತ್ರ, ವಿಶಾಖ ನಕ್ಷತ್ರ, ತುಲಾರಾಶಿಯ 5'.4'' ಎತ್ತರದ 28 ವರುಷದ ಬಿ.ಎಸ್ಸಿ, ಎಂ.ಬಿ.ಎ. ಕಲಿತು ಮುಂಬಯಿಯಲ್ಲಿ ಉದ್ಯೋಗದಲ್ಲಿರುವ ವಧುವಿಗೆ ಎಂ.ಬಿ.ಎ./ ಎಂ.ಟೆಕ್./ಎಂ.ಸಿ.ಎ. ಆಗಿ ಉದ್ಯೋಗದಲ್ಲಿರುವ ವರ ಬೇಕಾಗಿದ್ದಾನೆ. ಸಂಪರ್ಕಿಸಿ : 02851-234448

## ವಧು ಬೇಕಾಗಿದ್ದಾಳೆ

ವಾಶಿಷ್ಠ ಗೋತ್ರ, ಬಿ.ಇ. ಮಾಡಿ ಮುಂಬಯಿಯಲ್ಲಿ ಸೋಫ್ಟ್‌ವೇರ್ ಇಂಜಿನಿಯರ್ ಆಗಿರುವ 5'.8$^1/_2$'' ಎತ್ತರದ 30 ವರ್ಷದ ಹವ್ಯಕ ಹುಡುಗನಿಗೆ ಒಳ್ಳೆಯ ಮನೆತನದ, ಕಲಿತಿರುವ ಸುಂದರ 5'.4'' ಎತ್ತರದ ಹುಡುಗಿ ಬೇಕಾಗಿದ್ದಾಳೆ. ಸಂಪರ್ಕಿಸಿ : 8652144308


PAGE DONATED BY : **WELL WISHER OF HWT**

# A CHARITY SHOW

**To raise Funds for Educationl Aid**

**On the occasion of**
**HAVYAKA WOMEN CONVENTION**

**Yakshagana**

## DAKSHA YAJNA

**by**
**Sahyadri Mahila Yakshagana Samuh**

## DANCE PERFORMANCE

**by**
**Yuva Kala Bharati ,**
**Pavitra Bhat and his Team**

**Chief Guest :**
**SMT. BHUVANESHWARI HEGDE**
**(Humorist, Kannada Writer)**

**Date : 10/4/2011**

**Time : 3.00p.m. to 9.00 p.m.**

**Venue :**
**Vishveshwarayya Hall,**
**Karnataka Sangha,**
**Matunga (W).**

## ನಾವು ಹವ್ಯಕರೆಂದು ಜನಗಣತಿಯಲ್ಲಿ ನಮೂದಿಸೋಣ

**ಶ್ರೀ ರಾಮಚಂದ್ರಾಪುರ ಮಠ ಮತ್ತು ಶ್ರೀಸ್ವರ್ಣವಲ್ಲೀ ಮಠದಂತಹ ಗುರುಪರಂಪರೆಯನ್ನು ಹೊಂದಿದ, ಅಂತಸತ್ವದಿಂದ ಕೂಡಿದ ಹವ್ಯಕ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡು ಹೋಗುವದು ಮಹತ್ವವಾಗಿದೆ. ಆಧುನಿಕ ವಿದ್ಯಾಭ್ಯಾಸ ಪಡೆದು ದೇಶದ ವಿವಿಧ ಪಟ್ಟಣ ನಗರಗಳಲ್ಲಿ ಪ್ರಗತಿಯನ್ನು ಸಾಧಿಸುತ್ತಿರುವ ಹವ್ಯಕರು ರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವದು ಅವಶ್ಯವಾಗಿದೆ. ಮುಂದಿನ ತಿಂಗಳು ಭಾರತ ಸರಕಾರ ನಡೆಸುವ ಜನಗಣತಿಯಲ್ಲಿ ಪ್ರತಿಯೊಬ್ಬ ಹವ್ಯಕನೂ 'ಹವ್ಯಕ'ನೆಂದು ಗುರುತಿಸಿ ದಾಖಲಿಸೋಣ ಅಂದರೆ ಜನಗಣತಿಯಲ್ಲಿ ಸ್ವಯಂ ಸೇವಕರು ತುಂಬಿಸಿಕೊಳ್ಳುವ ಫೋರ್ಮ್‌ನಲ್ಲಿರುವ ಜಾತಿಯ ಕೋಲಂನಲ್ಲಿ 'ಹವ್ಯಕ'ನೆಂದೂ ವರ್ಣದ ಕೋಲಂನಲ್ಲಿ 'ಬ್ರಾಹ್ಮಣ' ಎಂದೂ ಮಾತೃಭಾಷೆಯನ್ನು 'ಹವಿಗನ್ನಡ' ಎಂದೂ ಪ್ರತ್ಯೇಕವಾಗಿ ಸ್ಪಷ್ಟವಾಗಿ ಬರೆಯಬೇಕೆಂದು ಕಳಕಳಿಯ ವಿನಂತಿ.**

# ಚಿಂತನ – ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

## ಶರಣಾಗತಿ

ಒಂದು ಮಗು ತನ್ನ ಮುರಿದ ಆಟಿಗೆ ಕಾರನ್ನು ದುರಸ್ತಿಗಾಗಿ ತನ್ನ ತಂದೆ ಪರಮಾತ್ಮನೆಡೆಗೆ ಒಯ್ದಿತಂತೆ. ಅವನು ಅದನ್ನು ದುರಸ್ತಿ ಮಾಡಲು ಆರಂಭಿಸಿದೊಡನೆ ಮಗು ಅವನ ಸುತ್ತಲೂ ಸುಳಿಯುತ್ತ ಅದನ್ನು ಹೀಗೆ ದುರಸ್ತಿ ಮಾಡು, ಹಾಗೆ ದುರಸ್ತಿ ಮಾಡು ಎಂದು ತನ್ನ ಅಪಕ್ವ ಸಲಹೆ ಕೊಡತೊಡಗಿತಂತೆ. ಎಷ್ಟು ಹೊತ್ತಾದರೂ ಆಟಿಗೆ ದುರಸ್ತಿಯಾಗದಿದ್ದುದನ್ನು ನೋಡಿ ಅದನ್ನು ಕಸಿದುಕೊಂಡು ಅಳುತ್ತಲೇ ಹೇಳಿತಂತೆ ಇಷ್ಟು ಸಾವಕಾಶವಾಗಿ ಮಾಡಿದರೆ ನನ್ನ ಆಟಿಗೆ ದುರಸ್ತಿ ಆಗುವುದೆಂದು? ಆಗ ತಂದೆ ಪರಮಾತ್ಮ ಹೇಳಿದನಂತೆ ನನ್ನ ಮಗುವೇ? ನಾನೇನು ಮಾಡಲಿ? ನೀನು ಅದನ್ನು ನನಗೆ ದುರಸ್ತಿ ಮಾಡಲೇ ಬಿಡಲಿಲ್ಲವಲ್ಲ.

ನಾವು ಅನೇಕ ಬಾರಿ ಶರಣಾಗತಿಯ ವಿಷಯವನ್ನು ಹೇಳುತ್ತೇವೆ. ನಮ್ಮೆಲ್ಲ ಪ್ರಯತ್ನಗಳೂ ವಿಫಲವಾದಾಗ ಎಲ್ಲವನ್ನು ಪರಮಾತ್ಮನಿಗೆ ಒಪ್ಪಿಸಿದ್ದೇವೆ; ಅವನಿಷ್ಟ ಬಂದಂತೆ ಮಾಡಲಿ ಎಂದು ಹೇಳುತ್ತೇವೆ. ಆದರೆ ನಮ್ಮ ಶರಣಾಗತಿ ಎಂದೂ ಸಂಪೂರ್ಣವಾಗಿರುವುದಿಲ್ಲ. ಸಂಪೂರ್ಣ ಶರಣಾಗತಿಗೆ ಬೇಕಾದ ಶ್ರದ್ಧೆ ನಮ್ಮಲ್ಲಿರುವುದಿಲ್ಲ. ಆಟಿಗೆ ಸಾಮಾನನ್ನು ದುರಸ್ತಿ ಮಾಡಿಸಿಕೊಳ್ಳಲು ದೇವನೆಡೆಗೆ ಹೋದ ಮಗುವಿನ ಅವಸ್ಥೆಯೇ ನಮ್ಮ ಅವಸ್ಥೆಯಲ್ಲವೇ? ನಮ್ಮಲ್ಲಿ ಶ್ರದ್ಧೆಯಾಗಲೀ, ತಾಳ್ಮೆಯಾಗಲೀ ಸಂಪೂರ್ಣವಾಗಿರುವುದಿಲ್ಲ. ನಮ್ಮದೇ ಅಹಂಕಾರ ಯಾವಾಗಲೂ ಅಡ್ಡ ಬರುತ್ತದೆ.

ಮಗುವಿನ ಎಲ್ಲ ಅವಶ್ಯಕತೆಗಳನ್ನು ತಾಯಿ ಪೂರೈಸುತ್ತಾಳೆ. ಮಗುವು ತನ್ನ ಬಯಕೆಗಳನ್ನು ಅಥವಾ ಅವಶ್ಯಕತೆಗಳನ್ನು ತಾಯಿಯ ಗಮನಕ್ಕೆ ತರಲಿ ಅಥವಾ ಬಿಡಲಿ. ತಾಯಿಯೇ ಮಗುವಿನ ಸಂಪೂರ್ಣ ಜವಾಬ್ದಾರಿ ಹೊತ್ತು ಮಗುವನ್ನು ಬೆಳೆಸುವುದಿಲ್ಲವೇ? ಏಕೆಂದರೆ ಮಗು ಸಂಪೂರ್ಣವಾಗಿ ತಾಯಿಗೆ ಶರಣಾಗಿದೆ. ಆದರೆ ನಾವು ಬೆಳೆಯುತ್ತ ಹೋದಂತೆ ಮಗುವಿನ ಮುಗ್ಧತೆ ಕಳೆದುಕೊಂಡು, ನಮ್ಮದೇ ಆಯ್ಕೆಯನ್ನು ಮುಂದಿಟ್ಟುಕೊಂಡು ಕೆಲಸವಾಗಬೇಕೆಂದು ಬಯಸುತ್ತೇವೆ. ಪರಮಾತ್ಮನ ಇಚ್ಛೆಗನುಸಾರ ಕೆಲಸವಾಗಲು ಬಿಡುವುದೇ ಇಲ್ಲ.

ಅನೇಕ ಬಾರಿ ಯಾವುದರಿಂದ ನಮ್ಮ ಆತ್ಮೋದ್ಧಾರವಾಗುತ್ತದೆ, ನಮ್ಮ ಬೇಡಿಕೆಗಳೆಲ್ಲ ಈಡೇರಿದರೆ ಅದು ನಮ್ಮ ವ್ಯಕ್ತಿತ್ವದ ವಿಕಸನಕ್ಕೆ ಪೂರಕವೋ ಅಥವಾ ಮಾರಕವೋ ಎಂಬುದು ನಮಗೆ ತಿಳಿಯದು. ಅದಕ್ಕೆಂದೇ ಶಂಕರಾಚಾರ್ಯರು ಪ್ರಾರ್ಥಿಸುವಾಗ ಯಥಾಯೋಗ್ಯಂ ತಥಾಕುರು ಎಂದು ಕೇಳಿಕೊಳ್ಳುತ್ತಾರೆ. ಪ್ರಾರ್ಥಿಸುವುದು ಬೇಡುವುದು ನಮ್ಮ ಧರ್ಮ. ಆ ಪ್ರಾರ್ಥನೆಗೆ ಪರಮಾತ್ಮ ಯಾವ ಫಲ ಕೊಡುತ್ತಾನೆ ಎಂಬುದು ಅವನಿಗೆ ಬಿಟ್ಟ ವಿಷಯ. ಒಂದು ಮಾತನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಪರಮಾತ್ಮನು ಯಾವಫಲವನ್ನು - ಕಹಿ ಇರಲಿ ಅಥವಾ ಸಿಹಿ ಇರಲಿ, ನಮ್ಮ ಇಚ್ಛೆಗನುಗುಣವಾಗಿರಲಿ ಬಿಡಲಿ- ಕೊಟ್ಟರೂ ಅದು ಮಹಾಪ್ರಸಾದವೆಂದು ಸ್ವೀಕರಿಸುವದರಲ್ಲಿ ಮಾನವನ ಶಾಂತಿ ಇದೆ. ●

*PAGE DONATED BY : **SHRI N. R. HEGDE, DOMBIVLI** (DEC.-2011)*

# ಸಂಕ್ಷಿಪ್ತ ಸುದ್ದಿಗಳು

## ಸೇತುಬಂಧ ಸಮಿತಿಯಿಂದ ಸಾಧಕರಿಗೆ ಸನ್ಮಾನ ಪ್ರತಿಭಾ ಪುರಸ್ಕಾರ



ಕರ್ಕಿಯ ಶ್ರೀ ಚೆನ್ನಕೇಶವ ಹೈಸ್ಕೂಲಿನ ಪೂರ್ವ ವಿದ್ಯಾರ್ಥಿಗಳ ಸಂಘಟನೆಯಾದ ಸೇತುಬಂಧ ಸಮಿತಿಯು ಇತ್ತೀಚೆಗೆ ಕರ್ಕಿ ಊರಿನ ಖ್ಯಾತಿಯನ್ನು ನಾಡಿನಲ್ಲಿ ಮೆರೆಸಿದ ಕರ್ಕಿಯವರಾದ ಹಿರಿಯ ಕೊಳಲುವಾದಕರಾದ ಕೃಷ್ಣ ಗಣಪತಿ ಅವಧಾನಿ, ನಾಗರಿಕ ಪತ್ರಿಕೆಯ ಪ್ರಧಾನ ಸಂಪಾದಕ, ಸಾಹಿತಿ ಕೃಷ್ಣಮೂರ್ತಿ ಹೆಬ್ಬಾರ, ಪತ್ರಕರ್ತ ವಿಜಯಕುಮಾರ ನಾಯ್ಕ ಮತ್ತು ಖ್ಯಾತ ಮದ್ದಳೆವಾದಕ ಪರಮೇಶ್ವರ ಭಂಡಾರಿ ಇವರನ್ನು ಸೇತುಬಂಧ ಸಮಿತಿಯ ಅಧ್ಯಕ್ಷ ಎಸ್. ಜಿ. ಹೆಗಡೆ ಮುಖ್ಯ ಅತಿಥಿಗಳಾದ ಹಿರಿಯ ಪತ್ರಕರ್ತ ಜಿ. ಯು. ಭಟ್, ಸಮಿತಿಯ ಉಪಾಧ್ಯಕ್ಷ ಎನ್. ಆರ್. ಹೆಗಡೆ ರಾಘೋಣ, ಸಂಘಟನಾ ಕಾರ್ಯದರ್ಶಿ ಕೆ. ಎಸ್. ಭಟ್, ಖಜಾಂಚಿ ಎಂ.ಜಿ. ಭಟ್, ಆಡಳಿತ ಮಂಡಳಿ ಸದಸ್ಯರಾದ ಎಂ.ಪಿ.ಭಾಗ್ವತ ನೇತೃತ್ವದಲ್ಲಿ ಹಾರ್ದಿಕವಾಗಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾದ ಜಿ. ಯು. ಭಟ್ ಮಾತನಾಡಿ ಪ್ರಾಮಾಣಿಕತೆ, ಕಷ್ಟ ಸಂಹಿಷ್ಣುತೆ ಪರೋಪಕಾರ ಗುಣಗಳಿಗೆ ಕರ್ಕಿಯ ಜನ ಹೆಸರಾಗಿದ್ದು ತಮ್ಮೂರಿನ ಈ ಪರಂಪರೆಯನ್ನು ಇಂದೂ ಮುಂದುವರಿಸಿಕೊಂಡು ಹೋಗುತ್ತಿರುವ ಈ ನಾಲ್ವರ ಸನ್ಮಾನಿತರ ಮಾದರಿ ಅನುಕರಣೀಯ ಎಂದು ಹೇಳಿ ಕರ್ಕಿಯ ನಾಡುನುಡಿ, ಕಲಾಸೇವೆಯ ಉನ್ನತ ಪರಂಪರೆಯನ್ನು ಸಭಗೆ ವಿವರಿಸಿದರು. ಕೆ.ಎಸ್. ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ ಕರ್ಕಿಯ ಅಭಿವೃದ್ಧಿ, ಗಣ್ಯರ ಸನ್ಮಾನ, ವಿದ್ಯಾರ್ಥಿ ಪುರಸ್ಕಾರ ಕರ್ಕಿಯ ಎಲ್ಲ ಸಮಸ್ಯೆಗಳಿಗೆ ಸ್ಪಂದಿಸುವ ಹಲವು ಯೋಜನೆಗಳನ್ನು ಸೇತುಬಂಧ ಸಮಿತಿ ಹೊಂದಿದ್ದು ರಾಜಕೀಯೇತರ ಸಂಘಟನೆಯಾಗಿ ಈ ಸಮಿತಿಯನ್ನು ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಕರ್ಕಿ ಊರಿನಲ್ಲಿ ಪ್ರತಿ ವ್ಯಕ್ತಿಯೂ ಸೇತುಬಂಧ ಸಮಿತಿಗೆ ತನು-ಮನ-ಧನ ನೀಡಿ ಸಹಕರಿಸಬೇಕೆಂದು ವಿನಂತಿಸಿದರು. ಎನ್. ಆರ್. ಹೆಗಡೆ ರಾಘೋಣ ಸನ್ಮಾನಿತರನ್ನು ಸಕಾರಣವಾಗಿ ಅಭಿನಂದಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ ಎಸ್. ಜಿ. ಹೆಗಡೆ ಸೇತುಬಂಧ ಸಮಿತಿಯ ಕಾರ್ಯಯೋಜನೆಗಳ ವಿವರವನ್ನು ಸಭೆಗೆ ನೀಡಿ ಸರ್ವರ ಸಹಕಾರ ಕೋರಿದರು. ಆಡಳಿತ ಮಂಡಳಿ ಸದಸ್ಯರಾದ ಎಚ್. ಎನ್. ನಾಯ್ಕ ಪ್ರತಿಭಾ ಪುರಸ್ಕಾರ ನಡೆಸಿಕೊಟ್ಟರು. ಶಾಲಾ ಮುಖ್ಯಾಧ್ಯಾಪಕ ಎಲ್. ಎಂ. ಹೆಗಡೆ ಬಹು ಶಿಸ್ತಿನಿಂದ ಸಮಾರಂಭಕ್ಕೆ ಎಲ್ಲ ಸೌಕರ್ಯಗಳನ್ನು ನೀಡಿ ಸಹಕರಿಸಿರು.

ಕ್ರಮವಾಗಿ ಎಸ್. ಆರ್. ಹೆಗಡೆ ರಾಘೋಣ, ಪಿ. ಎನ್. ಹೆಗಡೆ, ಶ್ರೀಕಾಂತ ಹಿಟ್ನಳ್ಳಿ, ಎನ್. ಎಸ್. ಹೆಗಡೆ ಸನ್ಮಾನ ಪತ್ರಗಳನ್ನು ವಾಚಿಸಿದರು.

ಸಭೆಯ ಪ್ರಾರಂಭದಲ್ಲಿ ಸತೀಶ ಭಟ್ ಸ್ವಾಗತಿಸಿದರೆ, ಎಂ.ಪಿ.ಭಾಗ್ವತ ಸರ್ವರ ಆಭಾರ ಮನ್ನಿಸಿದರು. ಸೇತುಬಂಧ ಸಮಿತಿಯ ವಿವಿಧ ಗಣ್ಯರು ಅತಿಥಿ ಅಭ್ಯಾಗತರಿಗೆ ಹಾರ ಮತ್ತು ಪುಷ್ಪಗುಚ್ಛಗಳನ್ನು ಸಮರ್ಪಿಸಿ ಸಂಭ್ರಮಿಸಿದರು. ಸತೀಶ್ ಭಟ್ ಹಾಗೂ ಜಿ. ಎಸ್. ಭಟ್ ಕಾರ್ಯಕ್ರಮ ನಿರೂಪಿಸಿದರು.

## Congratulations



Smt. Mangala Bhat, participated in International Conference held at Banaras Hindu University, Varanasi from 9th Nov to 11th Nov 2010.She presented-paper on the Topic Cultural Archetype about India as revealed through the story telling in "Ramayan". About 300 to 400 delegates were present in the seminar, which included people from different countries. Smt. Mangala R. Bhat is an Associate Professor Department of English, M.M. Arts and Science College, Sirsi, North Kanara District.

## Honoured



Shri S. M. Bhat, Karki was honoured by Kannada Sangha, Nasik at the Annual Function held at Vedant Mangal Karyalaya Nasik on 26th December 2010. Nearly about 500 families gathered for the function.

Shri S. M. Bhat has always been a good social worker and served in different capacities. He has served as a member of Executive Committee of National Association of Blind. He is the founder member and President of 'Havyaka Association', Nashik.

## Donation



Received donation of Rs. 5000/- for Women Welfare Cell from Smt. Sumitra and Shri Vishnu Bhat on the happy occasion of the marriage of their son **Chi. Sudarshan** with **Chi. Sow. Nayana**, d/o. Smt. Mukta and Shri Shridhar Hegde, Chennimakki on 29th December 2010 at Kumta

***We Congratulate the newly married couple and wish them a happy married life.***

*PAGE DONATED BY :* ***SHRI BALCHANDRA MARKANDE, DOMBIVLI***

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***







## Sad Demise

- **Shri G.M. Bhagwat** (84),expired on 1/12/2010 at Pen, Dist. Raigad. He is survived by his wife.
- **Smt. Girija Bhat** (79), w/o. Ex president HWT Shri T. S. Bhat expired on 15.1.2011 after a short illness. She is survived by her husband, 4 daughters and a son.



***We pray for the eternal peace of the departed souls.***

## RUDRA CHANTING

With a view to encourage all Havyakas to learn the chanting of the 'Rudra Mahamantra', classes are started at Borivili, Goregaon, Thane, Dombivili and Navi Mumbai. All Havyaka males (even children) who have received their Brahmopadesham, are requested to avail of this opportunity and learn the Rudra.

*For further details, please contact :*
**Shrl K.S. Bhat - Mobile : 09594165004 or**
**Shri G.S. Hegde - Mobile : 09833118240.**
All classes are at convenient locations and time.


SUVITEK
INTERNATIONAL

**Authorised Dealers for :**
**ARMSTRONG, INTERARCH, CRIL**

- ★ PRE-ENGINEERED BUILDINGS
- ★ ROOFINGS
- ★ WALL CLADDINGS
- ★ THERMAL INSULATIONS
- ★ FALSE CEILINGS
- ★ FALSE FLOORINGS
- ★ BLINDS
- ★ SIGNAGES

◆

**5/98, Jayvijay Society, Sahar Road,**
**Mumbai-400 099 India**
**Tel. : 2834 2952 ● Fax : 2824 8794**
**E-mail : suvitek@gmail.com**

***ADVT.***


*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

RNI NO. MAHBIL / 2000 / 746,
Post al R.NO. L / TECH - 47 / 989 / MBI / 2009 - 11

| WPP Licence No. MR/Tech WPP - 188 / North / 09-11 Posted at Mumbai Patrika Channel Stg. Office Mumbai-400 001. | Date of Posting : 27, 28th of every previous month |
|---|---|

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**













*PAGE DONATED BY : **SHRI VIVEK BHAGWAT,** MULUND (DEC.-2010)*